farmers in our State. Therefore Sir, I demand, an irreducable minimum demand of mine, a judicial probe by a high judicial authority presided over by no less a person than the judge of the High Court. otherwise you will not be able to unearth this shady deal and put the Corporation on its even keel to serve the purpose for which it is founded. I hope the Hon'ble Minister will respond to this demand.

ಶ್ರೀ ಮಳ್ಳೂರು ಆನಂದರಾವ್.—ಇವತ್ತು ಸಭೆ ೧೧ ಗಂಟೆಗೆ ಶುರುವಾಯಿತು. ಈಗ ೫½ ಗಂಟೆ ಆಗಿದೆ. ೬½ ಗಂಟೆ ಕಾಲ ನಾವು ಕೂತಿದ್ದೇವೆ. ಅದಕ್ಕೋಸ್ಕರ ಇನ್ನೆಷ್ಟು ಹೊತ್ತು ನಾವು ಕೂತಿರಬೇಕು ಎಂದು ನಾನು ಕೇಳುತ್ತಿದ್ದೇನೆ. ನೈಟ್ ಷಿಫ್ಟ್ ಏನಾದರೂ ಹಾಕಿಕೊಳ್ಳುತ್ತಿದ್ದೀರಾ ?

ANNOUNCEMENT

Business of the House

ಅಧ್ಯಕ್ಷರು.—ಒಟ್ಟು ೨೦ ಜನ ಸದಸ್ಯರು ಮಾತನಾಡಿದ್ದಾರೆ. ಇವರಲ್ಲಿ ಈ ಕಡೆ ೧೧ ಜನ ಮಾತನಾಡಿದ್ದಾರೆ, ಆ ಕಡೆ ೯ ಜನ ಮಾತನಾಡಿದ್ದಾರೆ. ೬ ಗಂಟೆಕಾಲ ಆಪೊಸಿಷನ್ ಕಡೆಯವರಂ ತೆಗೆದುಕೊಂಡಿದ್ದಾರೆ. ೪ ಗಂಟೆ ಕಾಲ ರೂಲಿಂಗ್ ಪಾರ್ಟಿ ಈ ಕಡೆಯವರು ತೆಗೆದುಕೊಂಡಿದ್ದಾರೆ. ಇನ್ನೆಷ್ಟು ಜನ ಮಾತನಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ನಾವು ಮಾತನಾಡಬೇಕಂ ನಮಗೂ ಅವಕಾಶ ಕೊಡಿ ಕೊಡಿ ಎಂದರೆ ಹೇಗೆ ಸಾಧ್ಯ?

The Business Advisory Committee which met today have recommended that the House may have two sittings from tomorrow till the completion of discussion and voting of all the demands for Grants. The following programme is suggested.

22nd July *morning sitting* : Reply by the Minister for Revenue to the discussion on the demands relating to Revenue and Agriculture, after Questions and Calling Attention Notices etc.,

Afternoon sitting : Discussion and voting of Demands relating to Rural Development.

23rd July, 1980 ;	Discussion and voting of Demands relating to Education
24th July, 1980 ;	Discussion and voting of Demands relating to Industries, Sericulture, Mines & Geology, Youth Services and Forest.
25th & 26th July, 1980	All Demands relating to P. W. D. and Electricity as already scheduled.
28th & 29th July, 1980	Demands relating to Home, DPAR and Finance as already scheduled.
0th July, 1980	Appropriation Bill and other Bills.

Further programmes will be intimated to members later.

The Business Advisory Committee have further recommended that from 23rd to 29th July notices of Calling Attention and notices

under Rule 312 need not be put on the agenda to provide more time for discussion of demands and the pending notices may be taken up after 29th July, 1980.

SRI AZEEZ SAIT.—Sir, the rights of the Members have been curtailed by the Business Advisory Committee by prohibiting Members from not putting Calling Attention Notices and raising matters under rule 312 or adjournment motions. I feel the Business Advisory Committee has over-acted and taken away our rights. We do agree that our leaders are there in the Business Advisory Committee. They will have to realise the responsibility of Members also. Tomorrow if shooting or killing takes place, the House will have to discuss about it. We cannot prevent such discussions. Secondly, I would like to ask one simple question. Sir, you are the guardian and custodian of the House. We are treated as bonded labourers by asking us to sit from 9 to 1 and again from 3 to 6 and onwards. We are not given leisure of even half an hour for our lunch. If a worker in a factory works over-time he gets over-time wages. Similarly, the officers who work over-time will get extra allowances. We are worse than the bonded labourers. I am not prepared to agree to the views of the Business Advisory Committee

6

ಶ್ರೀ ಜೆ. ಎಚ್. ಪಟೇಲ್.—ಸ್ವಾಮಿ, ಈಗ ಸದನದ ಮುಂದೆ ಏನು ಬೇಡಿಕೆಗಳು ಇವೆ, ಆ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜಿನೆಸ್ ಅಡ್ವೈಸರಿ ಕಮಿಟಿಯವರು ತೀರ್ಮಾನ ಮಾಡಿದ್ದಾರೆ. ಇಲ್ಲಿ ಸದಸ್ಯರು ಎತ್ತಿರತಕ್ಕ ಪ್ರಶ್ನೆ, ನಮ್ಮ ಹಕ್ಕನ್ನು ಅವರು ಕಡೆಗಣಿಸಿದ್ದಾರೆ ಎನ್ನುವುದು ನಿಜವಾದರೂ ನಮ್ಮ ಮುಂದಿರತಕ್ಕ ಕಾಲ ಮತ್ತು ನಮಗಿರತಕ್ಕ ಕೆಲಸವನ್ನು ಅನಿವಾರ್ಯವಾಗಿ ಜೋಡಿಸುವ ದೃಷ್ಟಿಯಿಂದ ಆ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಕಾಲಿಂಗ್ ಅಟೆನ್‌ಷನ್ಸ್ ಮತ್ತು ರೂಲ್ ೩೧೨ ಇವೆರಡನ್ನೂ ತೆಗೆದು, ಆ ಸಮಯ ಇದೇ ರೀತಿ ಆಗುತ್ತಾ ಇದ್ದರೆ ನಮಗೆ ಪ್ರಯೋಜನ ಬರುವುದಿಲ್ಲ. ಇರುವ ಸಮಯದಲ್ಲಿ ಕರಾರುವಾಕ್ಕಾಗಿ ಇಷ್ಟು ಸಮಯ ಆ ಕಡೆಯವರಿಗೆ, ಇಷ್ಟು ಸಮಯ ಈ ಕಡೆಯವರಿಗೆ, ಆ ಕಡೆಯವರು ಇಷ್ಟು ಜನ, ಈ ಕಡೆಯವರು ಇಷ್ಟು ಜನ ಮಾತನಾಡುತ್ತಾರೆ. ಬೇರೆ ಯಾರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ತೀರ್ಮಾನ ಮಾಡಬಹುದು. ಮೊದಲು ೫ ಜನರ ಲಿಸ್ಟ್ ಕಳಿಸುವುದು, ಆಮೇಲೆ ೧೦-೧೧ ಜನರ ಲಿಸ್ಟ್ ಕಳಿಸುವುದು ಆಗುತ್ತಾ ಇದೆ. ಹಾಗೆ ಕೂತರೆ ನಮ್ಮ ಡಿಮ್ಯಾಂಡ್‌ಗಳನ್ನು ಮುಗಿಯುವುದಕ್ಕೆ ಆಗಸ್ಟ್ ಕೊನೇವರೆಗೆ ಕೂತರೂ ಆಗುವುದಿಲ್ಲ. ನಾನು ಸಲಹೆ ಮಾಡುವುದೇನೆಂದರೆ, ಇಂತಹ ಡಿಮ್ಯಾಂಡ್ ಮೇಲೆ ಆ ಡೆ ಇಷ್ಟು ಜನ, ಈ ಕಡೆ ಇಷ್ಟು ಜನ ಮಾತನಾಡುತ್ತಾರೆಂದು ಕರಾರುವಾಕ್ಕಾಗಿ ಹೇಳಬೇಕು. ಒಂದು ವೇಳೆ ನಮ್ಮ ನಿರೀಕ್ಷಣೆಗೆ ಮೀರಿದಂತ ಘಟನೆಯಾದರೆ ಅದನ್ನು ಸದನ ಪರಿಗಣಿಸಲ್ಪಡಬೇಕಾಗುತ್ತದೆ. ಅಂತಹ ಘಟನೆ ಏನೂ ಇಲ್ಲದೇ ಇದ್ದಾಗ ಆ ಸಮಯವನ್ನು ಕರಾರುವಾಕ್ಕಾಗಿ ಹಂಚಿಹಾಕಿ. ಪ್ರತಿಯೊಬ್ಬ ಸದಸ್ಯರಿಗೂ ೫-೧೦ ನಿಮಿಷ ಜಾಸ್ತಿ ಕೊಡಬೇಕಾಗುತ್ತದೆ ಎಂದು ಹೇಳಬಹುದು ಆದ್ದರಿಂದ ಸಮಯವನ್ನು ಕರಾರುವಾಕ್ಕಾಗಿ ಹಂಚಿ ಹಾಕಬೇಕಂ. ಕೆಲವು ಸಾರಿ ಮಾತನಾಡತಕ್ಕ ವ್ಯಕ್ತಿಗಳ ಆಧಾರದ ಮೇಲೆ ಹೆಚ್ಚು ಕಡಿಮೆಯಾಗುತ್ತದೆ.

ಒಬ್ಬ ಸದಸ್ಯರು.—ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್, ಥರ್ಡ್ ಕ್ಲಾಸ್ ಸದಸ್ಯರಿಗೆ ಇಂತಿಷ್ಟು ಎಂದು ಬೇರೆ ಬೇರೆ ಮಾಡಿ.

ಶ್ರೀ ಜೆ. ಎಚ್. ಪಟೇಲ್ —ಯಾರನ್ನೂ ಹೆಚ್ಚು ಕಡಿಮೆ ಎಂದು ಭಾವಿಸುವುದಿಲ್ಲ. ನಮಗೆ ಸಮಯ ಇಂತಿಷ್ಟು ಎಂದು ನಿಗದಿಯಾದರೆ, ಆ ಸಮಯಕ್ಕೆ ತಕ್ಕಂತೆ ವಿಚಾರಗಳನ್ನು ಹೊಂದಿಸಿಕೊಳ್ಳ

ಬಹುದು, ಹಾಗೆ ಆಗುತ್ತಾ ಇಲ್ಲ. ಆ ಕಡೆ, ಈ ಕಡೆ ಹೀಗೆ ಆಗುತ್ತಾ ಇದೆ, ಸಮಯ ಹತೋಟಿ ಇಲ್ಲದೆ ನಡೆಯುತ್ತಾ ಇದೆ. ಸದನದಲ್ಲಿ ಹಿರಿಯ ಸದಸ್ಯರಿದ್ದಾರೆ, ಅನುಭವಿಗಳಿದ್ದಾರೆ. ಇವತ್ತು ಎಷ್ಟು ಜನ ಸದಸ್ಯರು ಮಾತನಾಡುತ್ತಾರೆ, ಎಂದು ಪಟ್ಟಿ ತಿಳಿಸಿಬಿಡಿ, ಇನ್ನು ಸಮಯ ಎಷ್ಟಿದೆ ಎಂದು ತಿಳಿಸುತ್ತಾರೆ, ಅಷ್ಟರಲ್ಲಿ ಆಗುತ್ತದೋ ಇಲ್ಲವೋ ತಿಳಿಸುತ್ತಾರೆ. ಏಕೆಂದರೆ, ನಾನು ಎರಡು ದಿವಸಗಳಿಂದ ಬಂದು ಕೂತು ಸಾಕಾಗಿದೆ. ನನ್ನ ಹೆಸರು ಕರೆಯುವ ಹಾಗಿಲ್ಲ. ಕೆಲವರಿಗೆ ಎಲ್ಲಾ ಡಿಮ್ಯಾಂಡ್ ಮೇಲೆ ಮಾತನಾಡಬೇಕು ಎಂದು ಇದೆ. ಇನ್ನು ಕೆಲವರು ಎದ್ದು ಅವರ ಹೆಸರು ಇರಲಿ ಇಲ್ಲದಿರಲಿ ಯಜಮಾನಿಕೆ ವಹಿಸಿ ಹೀಗೆ ಆಗಬೇಕು, ಹಾಗೆ ಆಗಬೇಕು ಎಂದು ಹೇಳುವುದು ಇದೆ. ಸದನದಲ್ಲಿ ನಿಯಮಾವಳಿಗಳನ್ನು ಅನುಸರಿಸಬೇಕಾದ್ದು ಮುಖ್ಯ. ಹಿರಿಯರಾಗಿರಲಿ, ಮಂತ್ರಿಗಳಾಗಿರಲಿ, ಯಾರೇ ಆಗಿರಲಿ, ಕರಾರುವಾಕ್ಕಾಗಿ ಅನುಸರಿಸುತ್ತಾ ಇಲ್ಲ, ಅನುಸರಿಸುವುದು ತಮ್ಮ ಜವಾಬ್ದಾರಿ ಎಂದು ಎಣಿಸುವುದಿಲ್ಲ. ಆ ಕಡೆಯವರೂ ಅಷ್ಟೆ, ನಮ್ಮ ಕಡೆಯವರೂ ಅಷ್ಟೆ. ಆದುದರಿಂದ ತಾವು ಕರಾರುವಾಕ್ಕಾಗಿ ನಿಯಂತ್ರಿಸಿದರೆ ನಮ್ಮ ಸಮಯವೂ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಯಥಾ ಪ್ರಕಾರ ಅವ್ಯವಸ್ಥೆಯಾಗಿ ನಾವು ಇದನ್ನು ಆಗಸ್ಟ್ ೨೦ನೇ ತಾರೀಖು ಆದರೂ ಮುಗಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ತಾವು ಕರಾರುವಾಕ್ಕಾಗಿ, ಸ್ಟ್ರಿಕ್ಟ್ ಆಗಿ ಯಾರ ಮುಖವನ್ನು ನೋಡದೇ, ಮುಲಾಜು ನೋಡಿದ್ದರೆ ಈ ರೀತಿಯಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎ. ಜಿ. ಕೊಡಗಿ,—ಅಧ್ಯಕ್ಷರೇ, ಮಾನ್ಯ ಪಟೇಲರು ಹೇಳಿದ್ದನ್ನು ನಾನು ಸಹ ಪುಷ್ಟೀಕರಿಸುತ್ತೇನೆ. ಕೆಲವರು ಹೆಸರು ಕೊಟ್ಟಿದ್ದರೂ ಬರುವುದಿಲ್ಲ, ನಾನು ಎರಡು ದಿವಸಗಳಿಂದ ಕಾಯುತ್ತಿದ್ದೇನೆ. ನನ್ನ ಹೆಸರು ಬರಲಿಲ್ಲ ಆದಕ್ಕೆ ಇವತ್ತಾ ಏನಾದರೂ ಬರಬಹುದೇನೋ ಎಂದು ನಾನು ಮಂಗಳೂರಿನಿಂದ ಇವತ್ತು ಬೆಳಿಗ್ಗೆ ಇದಕ್ಕಾಗಿ ಅಷ್ಟು ದುಡ್ಡು ಖರ್ಚು ಮಾಡಿ ವಿಮಾನದಲ್ಲಿ ಬಂದೆ. ಇವತ್ತು ಇಷ್ಟು ಹೊತ್ತು ಆಗಿದೆ ಇನ್ನು ಯಾವಾಗ ನನ್ನ ಹೆಸರನ್ನು ಕರೆಯುತ್ತೀರೋ ಗೊತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ತಾವು ಕಾಲಪನ್ನು ನಿಗದಿಪಡಿಸಬೇಕು, ಮತ್ತೆ ಕೆಲವರು ಹೆಸರು ಇಲ್ಲದಿದ್ದರೂ ಹೇಗೋ ಮಾತನಾಡಿ ಬಿಡುತ್ತಾರೆ. ಆದುದರಿಂದ ತಾವು ಒಬ್ಬರಿಗೆ ಇಷ್ಟೇ ಕಾಲಾವಕಾಶವೆಂದು ನಿಗದಿ ಪಡಿಸಿ ಮಾಡಿದರೆ ಸರಿಹೋಗುತ್ತದೆ.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಕೊಡಗಿಯವರು ವಿಮಾನದಲ್ಲಿ ಬಂದಿದ್ದು ನಿಜ, ನಾನು ಹೀಗೆ ಅಸೆಂಬ್ಲಿಯಲ್ಲಿ ಮಾತನಾಡಲೇ ಬೇಕಾಗಿದೆ ಅದಕ್ಕಾಗಿ ೨೧೨ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬರುತ್ತಿದ್ದೇನೆಂದು ನನ್ನ ಹತ್ತಿರ ಸಹ ಹೇಳಿದ್ದರು. ಆದುದರಿಂದ ತಾವು ಸ್ವಲ್ಪ ಅವರ ಮೇಲೆ ಕನಿಕರ ತೋರಿಸಿ ಅವರಿಗೂ ಸಹ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಆ ಕಡೆಯವರು ಎದ್ದರೆ ೨–೨ ಗಂಟೆ ಕಾಲಾವಕಾಶವನ್ನು ಕೊಡುತ್ತೀರಿ, ಆದರೆ ನಾನು ಎದ್ದರೆ ಮಧ್ಯದಲ್ಲಿಯೇ ಕುಳಿತುಕೊಳ್ಳಿ ಎಂದು ಹೇಳುತ್ತೀರಿ, ಬೆಲ್ ಬಾರಿಸುತ್ತೀರಿ.

(ಗೊಂದಲ)

ಅಧ್ಯಕ್ಷರು.—ಅದಕ್ಕೆ ನಾನು ಆಗಲೇ ಹೇಳಿದೆ, ಯಾರು ಯಾರು ಎಷ್ಟೆಷ್ಟು ಹೊತ್ತು ಮಾತನಾಡಿದ್ದಾರೆಂಬುದನ್ನು. ಅದನ್ನು ಸದಸ್ಯರು ತಿಳಿದುಕೊಂಡು ಮಾತನಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಇವತ್ತಿನ ದಿವಸ ಬಿ.ಎ.ಸಿ. ಯಲ್ಲಿ ತೀರ್ಮಾನವಾಗಿರುವ ಪ್ರಕಾರ ಇವತ್ತಿನ ದಿವಸದ ಬಿಜಿನೆಸ್ ಮುಗಿಯಲೇ ಬೇಕು. ನಾಳೆ ಬೆಳಿಗ್ಗೆ ೮ ರಿಂದ ೯ ರ ತನಕ ಪ್ರಶ್ನೋತ್ತರ ವೇಳೆ ೯ ರಿಂದ ೧೦ ರ ತನಕ ಗಮನ ಸೆಳೆಯುವ ಸೂಚನೆ ಅನಂತರ ರಿಪ್ಲೈ ಎಂದು ತೀರ್ಮಾನವಾಗಿದೆ.

ಅಧ್ಯಕ್ಷರು.—ನಾಳೆ ಮಾತ್ರ ಪ್ರಶ್ನೋತ್ತರ ವೇಳೆ ಮತ್ತು ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಎಸ್. ಬಂಗಾರಪ್ಪ.—ನಾಡಿದ್ದು ಇಲ್ಲವೆಂದು ತಿಳಿಸಿದ್ದೀರಲ್ಲಾ.

ಶ್ರೀ ಜೆ. ಎಚ್. ಪಟೇಲ್.—ಇದು ಬಹಳ ಪ್ರಾಮುಖ್ಯವಾದದ್ದು, ನಾನು ಲೋಕಸಭೆಯಲ್ಲಿದ್ದಾಗ, ರಾತ್ರಿ ೧೧ ಗಂಟೆಯವರೆಗೆ ಕೂತಿದ್ದ ಅನುಭವವಿದೆ. ಒಂದೊಂದು ಸಾರಿ ಆ ರೀತಿ

ಯಾಗುತ್ತದೆ, ಇಲ್ಲಿ ಕೆಲವರು ಪ್ರಚಾರದ ಆಸೆಯಿಂದ ಮಾತನಾಡುವವರಿದ್ದಾರೆ. ಆದರೆ ಪ್ರೆಸ್ಸಿನವರು ೬½ ಗಂಟೆಗೆಲ್ಲಾ ಹೊರಟು ಹೋಗಿ ಬಿಡುತ್ತಾರೆ. ಪ್ರೆಸ್ಸಿಗೋಸ್ಕರವಾಗಿ ಇಲ್ಲಿ ಹೇಳತಕ್ಕಂಥ ಸದಸ್ಯರೂ ಇದ್ದಾರೆ. ಪ್ರೆಸ್ಸಿನವರು ಹೊರಟು ಹೋದರು ಎಂದರೆ ನೋಡಿ ಯಾರೂ ಹೆಚ್ಚು ವಿಶೇಷವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ ಪಬ್ಲಿಸಿಟಿ ಇರಬೇಕು ಇರುವಾರೆಂದು ಹೇಳುವುದಿಲ್ಲ ಆದುದರಿಂದ ತಾವು ಕರಾರುವಾಕ್ಕಾಗಿ ನಿಯಂತ್ರಿಸಬೇಕು ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಜೆ. ಎಚ್. ಪಟೇಲರವರು ಹೇಳಿರತಕ್ಕದ್ದರಲ್ಲಿ ಅರ್ಥವಿದೆ. ಕಾಲವನ್ನು ನಿಗದಿ ಪಡಿಸಿ ಅದರಂತೆ ನಡೆಯುವುದು ಒಳ್ಳೆಯ ಪದ್ಧತಿ, ಆ ರೀತಿ ಹಿಂದೆ ನಾವು ಅನೇಕ ಸಾರಿ ಈ ಸದನದಲ್ಲಿ ಮಾಡಿದ್ದು ಉಂಟು. ಆದಕ್ಕೆ ಜಂಟಲ್‌ಮ್ಯಾನ್ ಅಗ್ರಿಮೆಂಟ್ ಎಂದು ಹೇಳುತ್ತಾರೆ ಆದುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಕಾಲವನ್ನು ನಿಗದಿ ಪಡಿಸಿ ಅದರಂತೆ ನಡೆಯುವುದು ಒಳ್ಳೆಯದು. ಮತ್ತು ಅಧ್ಯಕ್ಷರೇ ಮಾನ್ಯ ಕಸಬೆಯವರು ಎಲ್ಲಿಗೊ ಅರ್ಜೆಂಟಾಗಿ ಇವತ್ತು ರಾತ್ರಿಯೇ ಹೋಗಬೇಕಾಗುವುದರಿಂದ, ಅವರ ಬೇಡಿಕೆಯ ಮೇಲೆ ಮಾತನಾಡಿದ್ದು ಆದ ಮೇಲೆ ಅವರು ಅರ್ಧ ಗಂಟೆಯಲ್ಲಿ ರಿಪ್ಲೈ ಕೊಟ್ಟು ಬಿಡುತ್ತಾರೆ: ಏತಕ್ಕೆಂದರೆ ಶ್ರೀ ಮಸಿಯಪ್ಪ ಪಂಚಿತರು ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಮಾತನಾಡಿದ್ದು ಆದಮೇಲೆ ಇವತ್ತೇ ಅರ್ಧ ಗಂಟೆಯೊಳಗೆ ಉತ್ತರ ಕೊಟ್ಟು ಅವರು ಹೋಗಬೇಕಾಗಿದೆ. ಏತಕ್ಕೆಂದರೆ ಅವರ ಕ್ಷೇತ್ರದಲ್ಲಿ ರಾಜ್ಯಪಾಲರು ಹೋಗುವ ಕಾರ್ಯಕ್ರಮವಿದೆ ಆದರೆ ಈಗಾಗಲೇ ರಾಜ್ಯಪಾಲರು ಅಲ್ಲಿಗೆ ಹೋಗಿದ್ದಾರೆ. ಅವರು ಸಹ ಅಲ್ಲಿಗೆ ಹೋಗಬೇಕಾಗಿರುವುದರಿಂದ ಇಲ್ಲಿ ಶಾಸನಸಭೆ ಇರುವಾಗ ಹೋಗಬಾರದೆಂದು ಇದ್ದರೂ ಸಹ ಅವರ ಕ್ಷೇತ್ರಕ್ಕೆ ಮಾನ್ಯ ರಾಜ್ಯಪಾಲರೇ ಹೋಗುತ್ತಿರುವುದರಿಂದ, ಅವರ ಭೇಡಿಕೆ ಏನಿದೆ ಅದಕ್ಕೆ ರಿಪ್ಲೈ ಕೊಟ್ಟುಬಿಟ್ಟು ಅಲ್ಲಿಗೆ ರಾತ್ರಿಯೇ ಹೋಗಬೇಕೆಂದಿದ್ದಾರೆ. ಆದುದರಿಂದ ಉಳಿದ ಬೇಡಿಕೆಗೆ ನಾಳೆ ನಾನು ರಿಪ್ಲೈ ಕೊಡುತ್ತೇನೆ. ಆದುದರಿಂದ ಇವತ್ತು ಆಗಲೇ ೬ ೧೫ ಗಂಟೆಯಾಗಿದೆ ಬೇಕಾದರೆ ಇತ್ತ ಕಡೆಗೆ ಇಬ್ಬರು ಅತ್ತ ಕಡೆಗೆ ಇಬ್ಬರಿಗೆ ಮಾತನಾಡಲು ಅವಕಾಶ ಕೊಡಿ ಅನಂತರ ಮಾನ್ಯ ಸಚಿವರು ಉತ್ತರ ಕೊಟ್ಟು ಬಿಡುತ್ತಾರೆ. ಉಳಿದಿರತಕ್ಕ ಸದಸ್ಯರು ಬಾಕಿ ಬೇರೆ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ಅವಕಾಶವಿರುತ್ತದೆ.

ಶ್ರೀ ಎಂ. ಮಳ್ಳೂರು ಆನಂದರಾವ್.—ಈಗ ಶ್ರೀ ಬಂಗಾರಪ್ಪನವರು ಹೇಳಿದರು ಶ್ರೀ ಕಸಬೆಯವರು ಎಲ್ಲಿಗೋ ಹೋಗಬೇಕಾಗಿದೆ ಅದಕ್ಕೆ ಉತ್ತರ ಕೊಟ್ಟು ಹೋಗಿ ಬಿಡುತ್ತಾರೆಂದು, ಆದರೆ ಚರ್ಚೆಯೇ ಮುಗಿದಿಲ್ಲ, ಅವರು ಹೇಗೆ ಉತ್ತರ ಕೊಡುವುದಕ್ಕೆ ಸಾಧ್ಯ ಸ್ವಾಮಿ? ಯಾರೂ ಚರ್ಚೆಯಲ್ಲಿ ಭಾಗವಹಿಸಿಯೇ ಇಲ್ಲ,

ಶ್ರೀ ಎಸ್. ಬಂಗಾರಪ್ಪ —ಮುಜರಾಯಿ ಇಲಾಖೆಯ ಮೇಲಿನ ಚರ್ಚೆಯಾದನಂತರ ಅಂತ ಹೇಳಿದೆ. ತಾವು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ.

ಶ್ರೀ ಎಂ. ಮಳ್ಳೂರು ಆನಂದರಾವ್.— ಮುಜರಾಯಿ ಇಲಾಖೆಯ ಮೇಲೆ ಮಾನ್ಯ ಶ್ರೀ ಮಸಿಯಪ್ಪನವರು ಒಬ್ಬರೇ ಮಾತನಾಡಿದ್ದಾರೆ, ನಾವು ಇಲ್ಲಿ ಶಾಂತ ರೀತಿಯಿಂದ ಕುಳಿತುಕೊಂಡಿದ್ದೇವೆ. ಮಾನ್ಯ ಶ್ರೀ ಬಂಗಾರಪ್ಪನವರ ಸಲಹೆಯನ್ನು ಒಪ್ಪಿಕೊಳ್ಳುವುದಾದರೆ ಅವರು ಚರ್ಚೆಯಿಲ್ಲದೆ ಯಾವ ಪಾಯಿಂಟ್ಸ್‌ಗಳಿಗೆ ಉತ್ತರ ಕೊಡುತ್ತಾರೆ? ಅವರು ಏನಾದರೂ ಕಲ್ಪನೆ ಮಾಡಿಕೊಂಡು ಉತ್ತರ ಕೊಡಬೇಕೇ!

ಶ್ರೀ ಎಸ್. ಬಂಗಾರಪ್ಪ.—ಬೇರೆಯವರು ಮಾತನಾಡಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಅಧ್ಯಕ್ಷರೇ, ಶ್ರೀ ಕಸಬೆಯವರನ್ನು ಕೇಳಿದರೂ ಅದೇ ಉತ್ತರ ಕೊಡವುದು, ಕೇಳದಿದ್ದರೂ ಅದೇ ಉತ್ತರ ಕೊಡುವುದು ಅಂತ ಹೇಳಿಬಿಡಿ.

(ಮಧ್ಯದಲ್ಲಿ ನಗು .....)

ಶ್ರೀ ಮಳ್ಳೂರು ಆನಂದರಾವ್.—ಮುಜರಾಯಿ ಇಲಾಖೆ ಮೇಲೆ ಚರ್ಚೆಯಾಗದೆ ಉತ್ತರ ಕೊಡಬಹುದೆನ್ನುವುದಾದರೆ ಚರ್ಚೆಯೂ ಬೇಡ, ಉತ್ತರವೂ ಬೇಡವೆಂದು ಹೇಳುತ್ತೇನೆ. ಇದಕ್ಕೆ ಸಭೆ ಒಪ್ಪಿದರೆ ಆಗಬಹುದು. ನವ್ಮ ತಾಳ್ಮೆಯನ್ನು ತಾವು ಪರೀಕ್ಷೆ ಮಾಡಬೇಕು. ಬೆಳಿಗ್ಗೆ ೧೦ ರಿಂದ ಸಂಜೆ ೬ ಗಂಟೆ

ಯವರೆಗೆ ಯಾವಾಗ ಕರೆಯುತ್ತಾರೋ ಎಂದು ಆತ್ತಲಿತ್ತ ಹೋಗದೆ ಕುಳಿತಲ್ಲೇ ಕುಳಿತಿದ್ದೇನೆ. ಆದ್ದರಿಂದ ಈಗ ಸಭೆಯನ್ನು ಮುಂದೂಡಿ ಬೆಳಿಗ್ಗೆ ಲೆಕ್ಕ ಕರೆಯಿರಿ. ನಾಳೆ ಸ್ವಲ್ಪ ಸಮಯವನ್ನು ಸದಸ್ಯರುಗಳು ಮಾತನಾಡುವದಕ್ಕೆ ಕೊಡಿ. ಅನಂತರ ಮಾನ್ಯ ಮಂತ್ರಿಗಳು ಉತ್ತರಕೊಟ್ಟು ಹೆಲಿ ಕ್ಯಾಪ್ಟರ್‌ನಲ್ಲಿ ಬೇಕಾದರೆ ಹಾರಲಿ.

ಶ್ರೀ ಬಿ.ವಿ. ಕಕ್ಕಿಲಾಯ —ಮಾನ್ಯ ಜೆ.ಹೆಚ್. ಪಟೇಲರು ಏನು ಹೇಳಿದ್ದಾರೆ ಅದೇ ರೀತಿ ತಾವು ಸದನದ ಕಲಾಪಗಳನ್ನು ಕರಾರುವಾಕ್ಕಾಗಿ ನಿಯಂತ್ರಿಸಬೇಕಾಗುತ್ತದೆ. ಅಂದರೆ ಎಲ್ಲರೂ ಒಂದೇ ರೀತಿ ಇಷ್ಟೇ ಕಾಲದಲ್ಲಿ ಮಾತನಾಡಬೇಕೆಂದು ಅಲ್ಲ. ಯಾರಿಂದ ಈ ಸದನದಲ್ಲಿ ಹೆಚ್ಚು ವಿಷಯಗಳು ಬರುತ್ತವೆಯೋ ಅಂಥವರಿಗೆ ಸ್ವಲ್ಪ ಕಾಲಾವಕಾಶವನ್ನು ಜಾಸ್ತಿ ಕೊಡಬೇಕಾಗುತ್ತದೆ. ಅದನ್ನು ಆಯಾಯ ಪಕ್ಷದವರಿಗೆ ಕೊಟ್ಟಿರತಕ್ಕ ಕಾಲದಲ್ಲಿ ಅಡ್ಜೆಸ್ಟ್ ಮಾಡಿಕೊಳ್ಳಬಹುದು ಮಾನ್ಯ ಭಾಸ್ಕರ ಶೆಟ್ಟರು ಬಹಳ ವ್ಯಂಗ್ಯವಾಗಿ ಒಂದು ಮಾತನ್ನು ಹೇಳಿದರು. ಮಾನ್ಯ ಕೊಡಗಿಯವರಿಗೆ ಭಾಸ್ಕರ ಶೆಟ್ಟರು ಏನು ಸಮಯ ಕೊಡಿಸಬೇಕಾಗಿಲ್ಲ, ಅಧ್ಯಕ್ಷರು ಬೇಕೆಂದರೆ ಕೊಡುತ್ತಾರೆ.....

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾನು ವ್ಯಂಗ್ಯವಾಗಿ ಹೇಳಲಿಲ್ಲ.

ಶ್ರೀ ಬಿ ವಿ ಕಕ್ಕಿಲಾಯ —ತಾವು ವ್ಯಂಗ್ಯವಾಗಿಯೇ ಹೇಳಿದಿರಿ. ಇದು ಸರಿಯಾದುದಲ್ಲವೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ಬಗ್ಗೆ ತೀವ್ರವಾಗಿ ನನ್ನ ಪ್ರತಿಭಟನೆ ವ್ಯಕ್ತ ಮಾಡುತ್ತೇನೆ. ಮಾನ್ಯ ಅಧ್ಯಕ್ಷರು ಯಾರ್ಯಾರಿಗೆ ಎಷ್ಟೆಷ್ಟು ಸಮಯವನ್ನು ಕೊಡಬೇಕೆಂದು ನಿಗದಿ ಮಾಡಿರುತ್ತಾರೋ ಆ ಪ್ರಕಾರ ಕೊಡುತ್ತಾರೆ. ತಮ್ಮ ಸಮಯವನ್ನೇನೂ ಅವರಿಗೆ ಕೊಡುವುದಿಲ್ಲ. ವಿಮಾನದಲ್ಲಿ ಬಂದರು ಅಂದಾಕ್ಷಣ ಕೊಡಲೇಬೇಕೆಂದೇನೂ ಇಲ್ಲ. ಅವಕಾಶ ಇದ್ದರೆ ಕೊಡುತ್ತಾರೆ, ಇಲ್ಲದಿದ್ದರೆ ಕೊಡುವುದಿಲ್ಲ. ಅದು ಅಧ್ಯಕ್ಷರಿಗೆ ಸೇರಿದ್ದು. ತಾವು ಆ ರೀತಿ ವ್ಯಂಗ್ಯವಾಗಿ (ಆತುರದಲ್ಲಿದ್ದಾರೆಂಬ ರೀತಿಯಲ್ಲಿ) ಮಾತನಾಡಬಾರದೆಂದು ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಅಜೀಜ್ ಸೇಟ್‌ರವರು ಮಾನ್ಯ ಭೀಮಣ್ಣ ಖಂಡ್ರೆಯವರಿಗೆ ಹೇಳಿದ ಪದಗಳನ್ನು ನಾನು ಎಕ್ಸ್‌ಪಂಜ್ ಮಾಡಿದ್ದೇನೆ. ಮತ್ತು ಮಾನ್ಯ ಖಂಡ್ರೆಯವರು *** ಪುನ: *** ಉಪಯೋಗಿಸಿದ ಪದಗಳನ್ನೂ ಕೂಡ ಎಕ್ಸ್‌ಪಂಜ್ ಮಾಡಿದ್ದೇನೆ. ದಯಮಾಡಿ, ಇಂಥ ಪದಗಳನ್ನು ಪದೇ ಪದೇ ಬಳಸಬೇಡಿ ಎಂದು ವಿನಂತಿ.

ಶ್ರೀ ಬಿ. ಭಾಸ್ಕರ ಶೆಟ್ಟಿ —ನಾನು, ಕೊಡಗಿಯವರು ಮತ್ತು ಸಂಜೀವಶೆಟ್ಟರು ಒಟ್ಟಿಗೆ ಮಾತನಾಡಿಕೊಂಡು ಬಂದೆವು. ಮಾನ್ಯ ಕೊಡಗಿಯವರು ೨೧೨ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ವಿಮಾನದಲ್ಲಿ ಬಂದಿದ್ದೇನೆಂದು ಹೇಳಿದ್ದನ್ನು ಪುಷ್ಟೀಕರಿಸಲಿಕ್ಕೆ ನಾನು ಮಾತನಾಡಿದೆನೇ ವಿನಹ ವ್ಯಂಗ್ಯವಾಗಿ ಮಾತನಾಡತಕ್ಕದ್ದು ನನಗೆ ಗೊತ್ತೇ ಇಲ್ಲ.

SRI K. BHASKAR NAIDU.—Sir, we will wait till 8 to 9 O'clock. You give a chance to all. I have some interest in Muzrai demands and I want to hear in particular from Sri Mallur Anand Rao. Some people have spoken on agriculture and so many other things. I have got some thing to be spoken on religion.

ಶ್ರೀ ಅಜೀಜ್ ಸೇಟ್.—ತಾವು ಈಗ ಕೆಲವು ಶಬ್ದಗಳನ್ನು (ಮಾತುಗಳನ್ನು) ಎಕ್ಸ್‌ಪಂಜ್ ಮೊಡಿರುವುದಾಗಿ ಹೇಳಿದಿರಿ. ನಾನು ೩೧ ಹಲ್ಲುಗಳನ್ನು ಕಿತ್ತು ನಿಮ್ಮ ಕೈಗೆ ಕೊಡುತ್ತೇನೆಂದು ಹೇಳಿದೆ. ಅದೂ ಕೂಡ ವರದಿಯಲ್ಲಿ ಬಂದಿರಬಹುದಾದ್ದರಿಂದ ಅದನ್ನೂ ಎಕ್ಸ್‌ಪಂಜ್ ಮಾಡಿ.

ಅಧ್ಯಕ್ಷರು —ಅದನ್ನು ನಾನು ನೋಡುತ್ತೇನೆ.

ಶ್ರೀ ಕೆ. ಭಾಸ್ಕರ ನಾಯ್ಡು.—ಮಾನ್ಯ ಅಜೀಜ್ ಸೇಟರಿಗೆ ಇವರು ಹೇಳಿದರು (ಮಾನ್ಯ ಖಂಡ್ರೆಯವರನ್ನು ತೋರಿಸಿ) ನಾನು ನಿಮ್ಮ ೩೧ ಹಲ್ಲುಗಳನ್ನು ಕಿತ್ತು ಕೊಡುತ್ತೇನೆ ಎಂದು.

ಅಧ್ಯಕ್ಷರು.—ಎಲ್ಲಿಯಾದರೂ ಕಿತ್ತುಕೊಂಡು ಹೋಗಿ, ಇಲ್ಲಿ ಮಾತ್ರ ಆ ರೀತಿ ಮಾತನಾಡಬೇಡಿ.

ಶ್ರೀ ಅಜೇಜ್ ಸೇಟ್.—ಆ ಕಡೆಯ ಸದಸ್ಯರಿಗೆ ಕೊಡತಕ್ಕ ವೇಳೆಯನ್ನು ಸ್ವಲ್ಪ ಕಡಿಮೆ ಮಾಡಿ ಈ ಕಡೆಯವರಿಗೆ ಸ್ವಲ್ಪ ಜಾಸ್ತಿ ಕೊಟ್ಟರೆ ಈ ಕಡೆ ಇರುವ ಎಲ್ಲ ಸದಸ್ಯರುಗಳಿಗೂ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ, ಆ ಕಡೆಯವರು ಪಾರ್ಟಿ ಮೀಟಿಂಗ್‌ನಲ್ಲಿ ಚರ್ಚೆ ಮಾಡುತ್ತಿರುತ್ತಾರೆ ಮತ್ತು ಇಲ್ಲಿಯೂ ಚರ್ಚೆ ಮಾಡುತ್ತಾರೆ. ವಿರೋಧ ಪಕ್ಷದಲ್ಲಿ ಒಂದೇ ಪಕ್ಷಕ್ಕೆ ಸೇರಿದ ಜನರಿಲ್ಲ. ಜನತಾದವರು, ಕಾಂಗ್ರೆಸ್(ಯು)ನವರು, ಪಿಎಸ್‌ಪಿ.ಯವರು, ಮುಸ್ಲಿಂ ಲೀಗ್‌ನವರು ಜೊತೆಗೆ ಮಹಿಳೆಯರದೂ ಒಂದು ಪಕ್ಷ ಇದೆಯೆಂದು ಇವತ್ತು ತಾನೇ ಕೇಳಿದೆ. ಆ ಪಕ್ಷಗಳ ಮುಖಂಡರೆಲ್ಲ ಮಾತನಾಡಬೇಕಾಗುತ್ತದೆ. ಆದ್ದರಿಂದ, ಆಡಳಿತ ಪಕ್ಷದವರು ಸ್ವಲ್ಪ ತಾಳ್ಮೆಯಿಂದ ಈ ಕಡೆ ಇರುವ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ತುಂಬ ಉಪಕಾರ ಮಾಡಿದಂತಾಗುತ್ತದೆ.

ಅಧ್ಯಕ್ಷರು.—ಹೆಚ್ಚಿಗೆ ಸಮಯ ತೆಗೆದುಕೊಳ್ಳಬೇಡಿ ಎಂದು ನಾನು ಅವರಿಗೆ ತಿಳಿಸಿದ್ದೇನೆ.

† ಶ್ರೀ ಸಿ. ಎ. ಚಂದ್ರೇಗೌಡ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೆ, ನಾನು ಈ ದಿವಸ ಮಾನ್ಯ ಸಚಿವರುಗಳು ಮಂಡಿಸಿರತಕ್ಕ ಕಂದಾಯ, ವ್ಯವಸಾಯ ಹಾಗೂ ಮುಜರಾಯಿ, ಸ್ಟ್ಯಾಂಪ್, ರಿಜಿಸ್ಟ್ರೇಷನ್ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ನಿಂತಿದ್ದೇನೆಯೇ ಹೊರತು ಕಾರ್ಯಕಲಾಪಗಳ ಸಮಿತಿಯಲ್ಲಿ ಮಾತನಾಡಿದ ಮಾತುಗಳನ್ನು ಮಾತನಾಡುವುದಕ್ಕೆ ನಿಂತಿಲ್ಲ. ಈ ಮನೆಯಲ್ಲಿ ಅಧ್ಯಕ್ಷರು ಕರೆದಾಗ ಸಂಬಂಧಪಟ್ಟ ವಿಷಯದ ಬಗ್ಗೆ ಮಾತನಾಡಬೇಕು. ಕಾರ್ಯಕಲಾಪಗಳ ಸಮಿತಿಯ ವಿಚಾರಗಳನ್ನು ಮಾತನಾಡುವುದಾದರೆ ಒಳಗಡೆ ಪ್ರತ್ಯೇಕವಾಗಿ ಮಾತನಾಡಬಹುದು. ತಾವು ಏನು ಆದೇಶ ನೀಡುತ್ತೀರಿ ಅದರಂತೆ ನಡೆದುಕೊಂಡು ಹೋದರೆ ಈ ಮನೆಯ ಕಾರ್ಯಕಲಾಪಗಳು ಕಾಲಕ್ಕೆ ಸರಿಯಾಗಿ ನಡೆಯುವುದಕ್ಕೆ ಸಾಧ್ಯವೆಂದು ಹೇಳುತ್ತಾ, ಮಾನ್ಯ ಕಂದಾಯ ಸಚಿವರು ಏನು ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಒಂದು ಕಂದಾಯ ಇಲಾಖೆ ಏನಿದೆ ಇದು ಪ್ರಗತಿದಾಯಕವಾದ ಲ್ಯಾಂಡ್ ರಿಫಾರಮ್ಸ್ ಬಿಲ್ಲನ್ನು ಜಾರಿಗೆ ತಂದು ಇಡೀ ಕರ್ನಾಟಕದ ಜನತೆಯ, ಅದರಲ್ಲೂ ದೀನದಲಿತರ, ಬಡವರ, ಹರಿಜನ-ಗಿರಿಜನರ ಪ್ರೀತಿಗೆ ಪಾತ್ರವಾಗಿದೆ.

೬-೦೦ ಪಿ. ಎಂ.

ಇವತ್ತು ಈ ಒಂದು ಬಿಲ್ಲನ್ನು ತಂದಿದ್ದರಿಂದ ಅನೇಕ ಶೋಷಣೆಗಳಿಗೆ ಒಳಪಟ್ಟಂಥ ಗೇಣಿದಾರರು ಅನುಕೂಲವನ್ನು ಪಡೆದುಕೊಂಡಿದ್ದಾರೆ. ಈಗ ಗೇಣಿ ಜಮೀನು ಪಡೆದಿರತಕ್ಕ ಗೇಣಿದಾರರು, ನಿವೇಶನವನ್ನು ಪಡೆದಿರುವ ನಿವೇಶನರಹಿತ ಬಡಜನರು ಕಂದಾಯ ಇಲಾಖೆಯಿಂದ ಸೌಕರ್ಯಗಳನ್ನು ಪಡೆದು ಸಂತೋಷದಿಂದ ಇದ್ದಾರೆ. ಇದಕ್ಕಿಂತ ಹೆಚ್ಚಾಗಿ ಮುಂದೆ ಅನುಕೂಲಗಳನ್ನು ಪಡೆಯತಕ್ಕ ಜನರು ಆಸೆಯನ್ನು ಇಟ್ಟುಕೊಂಡಿದ್ದಾರೆ. ನಮ್ಮ ಸರ್ಕಾರದವರು ತಂದಿರುವ ಕಾನೂನಿನಿಂದ ನಮಗೆ ಇನ್ನೇನು ಅನುಕೂಲವಾಗುತ್ತದೋ ಎಂದು ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಈ ಕೆಲಸಕಾರ್ಯಗಳು ತೀವ್ರಗತಿಯಿಂದ ಆಗಬೇಕಾಗಿದೆ. ನಾನು ಮೊನ್ನೆ ನಡೆದ ಪಾರ್ಲಿಮೆಂಟ್ ಚುನಾವಣೆ ಸಂದರ್ಭದಲ್ಲಿ ಎಲ್ಲಾ ಮನೆಮನೆಗೂ ಹೋದಾಗ ನೋಡಿದೆ ಯಾರ ಮನೆಯಲ್ಲೂ ಕೂಡ ಮಾನ್ಯ ದೇವರಾಜಅರಸರ ಫೋಟೋ ವಾಗಲೀ, ಮಾನ್ಯ ಬಸವಲಿಂಗಪ್ಪನವರ ಫೋಟೋವಾಗಲೀ ಇರಲಿಲ್ಲ. ಬಡಜನರು, ಹರಿಜನಗಿರಿಜನರು ಏನಿದ್ದಾರೆ ಅವರ ಮನೆಗಳಲ್ಲಿ ಕೇವಲ ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಮಾತ್ರ ಇತ್ತು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆ ಕಡೆ ಇರತಕ್ಕ ಸದಸ್ಯರು ಮಾತನಾಡಿದಾಗ ಎಲ್ಲಾ ನಾವೇ ಮಾಡಿದ್ದು ಎಂಬ ಭಾವನೆಯಿಂದ ಮಾತನಾಡಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದ ಜನತೆ ಶ್ರೀಮತಿ ಇಂದಿರಾಗಾಂಧಿಯವರೇ ಎಲ್ಲವನ್ನು ಮಾಡಿದ್ದಾರೆ ಎಂಬ ಭಾವನೆಯಿಂದಿದ್ದಾರೆ ಎಂಬುದನ್ನು ಹೇಳುತ್ತಿದ್ದೇನೆ. ನಾನು ಹಳ್ಳಿಯಲ್ಲಿ ಸಾಮಾನ್ಯ ರೈತನ ಹತ್ತಿರ ಓಟು ಕೇಳುವುದಕ್ಕೆ ಹೋದಾಗ ದೇವರಾಜಅರಸರ ಸರ್ಕಾರ ಇಂಥಿಂಥ ಕೆಲಸ ಮಾಡಿದೆ. ಆದ್ದರಿಂದ ಅವರಿಗೆ ಪೂರ್ಣ ಬೆಂಬಲ ಕೊಡಬೇಕು ಎಂದು ಹೇಳಿದಾಗ ಆರೈತ ಏನು ಉತ್ತರ ಕೊಟ್ಟ ಎಂದರೆ ಗೊತ್ತಿದೆ ಬಿಡ್ರೀ ಶ್ರೀಮತಿ ಇಂದಿರಾಗಾಂಧಿಯವರು ದೆಹಲಿಯಿಂದ ಏನು ಆರ್ಡರ್ ಮಾಡುತ್ತಾರೋ ಅದನ್ನ ದೇವರಾಜ ಅರಸರು, ಬಸವಲಿಂಗಪ್ಪನವರು ನಮಗೆ ತಲುಪಿಸಿದರು, ಇವರೆಲ್ಲಾ ಪೋಸ್ಟ್‌ಮ್ಯಾನ್‌ಗಳಿದ್ದ ಹಾಗೆ ಎಂದು ಹೇಳಿದ. ಶ್ರೀಮತಿ ಇಂದಿರಾಗಾಂಧಿಯವರು ದೆಹಲಿಯಲ್ಲಿ ಕಾರ್ಯಕ್ರಮವನ್ನು ಹಾಕಿ ಎಲ್ಲಾ ಮಾಡಿ ಕರ್ನಾಟಕಕ್ಕೆ ಕಳುಹಿಸಿದಾಗ ದೇವರಾಜ ಅರಸರು, ಬಸವಲಿಂಗಪ್ಪನವರು ನಮಗೆ ನೇರವಾಗಿ ತಲುಪಿಸುತ್ತಾರೆ ಎಂದು ಉತ್ತರ ಕೊಟ್ಟಿದ್ದಾರೆ. ಜನ್ಮನವುಳ್ಳ

ಜನತೆ ಹಳ್ಳಿಗಳಲ್ಲಿ ಇದ್ದಾರೆ. ಹೀಗಿರುವಾಗ ನಮ್ಮ ಕಾರ್ಯಕ್ರಮವನ್ನು ಜಾಗರೂಕತೆಯಿಂದ ಅವರಿಗೆ ತಲುಪಿಸತಕ್ಕದ್ದು ನಮ್ಮ ಕರ್ತವ್ಯವಾಗಿದೆ. ಕಂದಾಯ ಇಲಾಖೆ ಸಾಮಾನ್ಯವಾದ ಇಲಾಖೆಯಲ್ಲಿ ಬಹಳ ಜವಾಬ್ದಾರಿಯಿರತಕ್ಕ ಇಲಾಖೆ. ಒಬ್ಬರ ಹಣೆಬರಹವನ್ನು ಇನ್ನೊಬ್ಬರಿಗೆ ಬರೆಯತಕ್ಕ ಇಲಾಖೆ. ಇದರ ಜವಾಬ್ದಾರಿ ಬಹಳ ಇದ್ದು ಈ ಇಲಾಖೆಗಳಲ್ಲಿ ಅನೇಕ ನ್ಯೂನತೆಗಳಿವೆ ಎಂಬ ಮಾತನ್ನು ಆ ಕಡೆ ಸದಸ್ಯರು ಮಂತ್ತು ಈ ಕಡೆ ಸದಸ್ಯರು ಹೇಳಿದ್ದಾರೆ. ಈ ಇಲಾಖೆಯಲ್ಲಿ ಹೆಚ್ಚಿನ ಬದಲಾವಣೆಯಾಗಬೇಕು, ದಕ್ಷತೆ ಹೆಚ್ಚಬೇಕು ಎಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಅನೇಕ ದಕ್ಷ ಅಧಿಕಾರಿಗಳು ಈ ರೆವಿನ್ಯೂ ಇಲಾಖೆಯಲ್ಲಿ ಇದ್ದಾರೆ, ಅನೇಕ ಪ್ರೊಬೇಷನರಿ ಅಧಿಕಾರಿಗಳು ತ್ವರಿತವಾಗಿ ಕಾರ್ಯಕ್ರಮವನ್ನು ಮಾಡಬೇಕು, ಚೆನ್ನಾಗಿ ದಕ್ಷತೆಯಿಂದ ಮಾಡಬೇಕು ಎಂಬ ಉತ್ಸಾಹಶಾಲಿಗಳು ಇದ್ದಾರೆ. ಯುವಕ ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮಿಷನರ್‌ಗಳು, ತಹಸೀಲ್ದಾರರುಗಳು ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸ್ಥಾನಗಳನ್ನು ಅಲಂಕರಿಸಿದ್ದಾರೆ. ಆದರೆ ಕೆಳಮಟ್ಟದ ಅಧಿಕಾರಿಗಳು ತಾಲ್ಲೂಕು ಕಚೇರಿಗಳು, ಜಿಲ್ಲಾ ಕಚೇರಿಗಳು ಮಂತ್ತು ಸಬ್-ರಿಜಿಸ್ಟ್ರಾರ್ ಕಚೇರಿಗಳು ಇಂಥ ಕಚೇರಿಗಳಲ್ಲಿ ಹಳೇ ಹುಳಿಗಳಿದ್ದು ಸರಿಯಾಗಿ ಕೆಲಸ ಮಾಡುತ್ತಿಲ್ಲ.

ಶ್ರೀ ಜೆ ಹೆಚ್. ಪಟೇಲ್.— ಚರ್ಚೆ ಎಲ್ಲಿಯವರೆಗೆ ನಡೆಯಬೇಕು ಎಂಬ ಬಗ್ಗೆ ಏನು ನಿರ್ಧಾರ ತೆಗೆದುಕೊಂಡಿದ್ದಾರೋ ಗೊತ್ತಾಗಲಿಲ್ಲ. ಎಷ್ಟು ಹೊತ್ತಾದರೂ ಇವತ್ತು ಚರ್ಚೆ ಮುಗಿಸಬೇಕೆಂಬ ನಿರ್ಧಾರ ಮಾಡಿದ್ದಾರೋ, ಅಥವಾ ನಾಳೆ ಮುಗಿಸಬೇಕೋ ಏನು ನಿರ್ಧಾರ ತೆಗೆದುಕೊಂಡಿದ್ದಾರೆ?

ಶ್ರೀ ಪುಟ್ಟೂರು ಆನಂದರಾವ್.— ಹೌದು ನಿರ್ಧಾರ ಏನು ಎಂಬುದನ್ನು ತಿಳಿಸಲಿ.

ಶ್ರೀ ಎಸ್. ಬಂಗಾರಪ್ಪ.— ಈಗ ಬಹಳ ಜನ ಇದ್ದಾರೆ. ಕೊನೇಪಕ್ಷ ಆ ಕಡೆಯಿಂದ ಇಬ್ಬರು, ಈ ಕಡೆಯಿಂದ ಇಬ್ಬರು ಮಾತನಾಡಿದಮೇಲೆ ಚರ್ಚೆಯನ್ನು ಮುಗಿಸಿಬಿಡೋಣ.

ಶ್ರೀ ಜೆ. ಹೆಚ್. ಪಟೇಲ್.— ಎಷ್ಟೇ ಜನ ಇದ್ದರೂ ಚರ್ಚೆ ಇವತ್ತೇ ಮುಗಿಸಬೇಕಾದರೆ ಎಷ್ಟು ಹೊತ್ತು ಸಮಯ ಬೇಕಾಗುತ್ತದೆ, ಎಷ್ಟು ಹೊತ್ತು ಕುಳಿತುಕೊಳ್ಳೋಣ?

ಶ್ರೀ ಎಸ್. ಬಂಗಾರಪ್ಪ.— ನಾಳೆ ಬರೀ ರಿಪ್ಲೈ ಇಟ್ಟುಕೊಳ್ಳೋಣ, ನಾಳೆಯೂ ಚರ್ಚೆ ಮುಂದುವರೆದರೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಚರ್ಚೆ ಇವತ್ತೇ ಮುಗಿಯಲಿ.

ಶ್ರೀ ಎ.ಜಿ. ಕೊಡಗಿ.— ನಾಳೆ ದಿವಸ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಮೇಲೆ ಬೇಡಿಕೆ ಇದೆ. ಅದರಲ್ಲಿ ಹೆಚ್ಚು ಜನ ಪಾಲ್ಗೊಳ್ಳುವುದಿಲ್ಲ. ಆದರೆ ಇದು ಪ್ರಾಮುಖ್ಯವಾದ ಖಾತೆಯಾಗಿರುವುದರಿಂದ ಹೆಚ್ಚು ಜನ ಭಾಗವಹಿಸಬೇಕಾಗಿದೆ. ಆದ್ದರಿಂದ ಈ ಬೇಡಿಕೆಯ ಮೇಲೆ ಚರ್ಚೆಯನ್ನು ನಾಳೆಗೂ ಮುಂದುವರೆಸಿ ನಾಳೆ ಸ್ವಲ್ಪ ಜನಕ್ಕೆ ಮಾತನಾಡಲು ಅವಕಾಶ ಕೊಡಿ ಇವತ್ತು ಮಾತನಾಡಿದವರಲ್ಲಿ ಕೆಲವರು ಹೆಚ್ಚು ಸಮಯ ತೆಗೆದುಕೊಂಡಿದ್ದಾರೆ. ಆದ್ದರಿಂದ ಬೇರೆಯವರಿಗೆ ಅವಕಾಶವಿಲ್ಲ ಎಂದರೆ ಕಷ್ಟವಾಗುತ್ತದೆ. ಯಾರೋ ಮಾಡಿದ ತಪ್ಪಿಗೆ ಬೇರೆಯವರಿಗೆ ಏತಕ್ಕೆ ಶಿಕ್ಷೆ? ಆದ್ದರಿಂದ ನಾಳೆಯೂ ಒಂದೆರಡು ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡಿ. ನಂತರ ಉತ್ತರ ಕೊಡಲಿ. ಗ್ರಾಮಾಭಿವೃದ್ಧಿ ಖಾತೆ ಮೇಲಿನ ಚರ್ಚೆಯನ್ನು ಬೇಗ ಮುಗಿಸಿಬಿಡೋಣ.

ಶ್ರೀ ಎಸ್. ಬಂಗಾರಪ್ಪ.— ನಾಳೆ ಮಧ್ಯಾಹ್ನದೊಳಗೆ ಡಿಮಾಂಡ್ಸ್ ಮುಗಿಯಬೇಕು. ಮಧ್ಯಾಹ್ನ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಮೇಲಿನ ಚರ್ಚೆ ಬರುತ್ತದೆ.

ಶ್ರೀ ಜೆ.ಹೆಚ್. ಪಟೇಲ್.— ಮುಗಿಸಬಹುದು ಏನೂ ತೊಂದರೆಯಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ನಾಳೆ ಬೆಳಗ್ಗೆ ೮ ಗಂಟೆಗೆ ಬೇಕಾದರೂ ಕುಳಿತುಕೊಳ್ಳೋಣ.

ಅಧ್ಯಕ್ಷರು.— ೮ ಗಂಟೆಗೆ ಕುಳಿತರೆ ೧೫ ನಿಮಿಷವಾದರೂ ಕೋರಂ ಆಗುವುದಿಲ್ಲ. ನಾನು ಬರುತ್ತೇನೆ ನನಗೆ ತೊಂದರೆಯಿಲ್ಲ. ಆದರೆ ಸದಸ್ಯರಿಗೆ ಆಗುತ್ತದೋ ಇಲ್ಲವೋ.

ಶ್ರೀ ಎ.ಜಿ. ಕೊಡಗಿ.— ೮-೩೦ಕ್ಕೆ ಕರೆಯಬಹುದು.

ಶ್ರೀ ಎಸ್. ಬಂಗಾರಪ್ಪ.— ಬೆಳಗ್ಗೆ ೮ ಗಂಟೆಗೆ ಸೇರೋಣ. ೮ ಗಂಟೆಯಿಂದ ೯ ಗಂಟೆವರೆಗೆ ಪ್ರಶ್ನೋತ್ತರಕ್ಕೆ ಗಂಟೆ. ಆಮೇಲೆ ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮಾವಳಿ ೩೧೨ರ ಮೇಲೆ ಚರ್ಚೆ ನಡೆಯಲಿ. ಇದಕ್ಕೂ ಸ್ವಲ್ಪ ಕಾಲ ರಿಸ್ಟ್ರಿಕ್ಷನ್ ಮಾಡಿಕೊಳ್ಳಬೇಕಾಗುತ್ತದೆ. ನಂತರ ೧೦-೩೦ರ ಹೊತ್ತಿಗೆ ಉತ್ತರ ಪ್ರಾರಂಭ ಮಾಡೋಣ. ಇದಕ್ಕೆ ಮಾನ್ಯ ಸದಸ್ಯರು ಒಪ್ಪುತ್ತಾರೆ ಎಂದು ಕಾಣುತ್ತದೆ.

ಶ್ರೀ ಮಳ್ಳೂರು ಆನಂದರಾವ್.— ಆ ರೀತಿ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಮಂತ್ರಿಗಳಾದ ಕಸಬೆಯವರು ರಾಜ್ಯಪಾಲರ ಜೊತೆ ಹೋಗ ವುದರಿಂದ...

ಶ್ರೀ ಮಳ್ಳೂರು ಆನಂದರಾವ್.— ನಮಗೆ ಯಾರು ಉತ್ತರ ಕೊಟ್ಟರೂ ಒಂದೇ. ಮಾನ್ಯ ಕಸಬೆ ಯವರು ಉತ್ತರ ಕೊಟ್ಟರೂ ಒಂದೇ ಮಾನ್ಯ ಬಂಗಾರಪ್ಪನವರು ಉತ್ತರ ಕೊಟ್ಟರೂ ಒಂದೇ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಚಿವರು ಇರುವುದಕ್ಕೆ ಸಾಧ್ಯವಿದ್ದರೆ ಇರುತ್ತಾರೆ. ಇಲ್ಲದಿದ್ದರೆ ನಾವು ಯಾರಾದರೂ ಉತ್ತರ ಕೊಡುತ್ತೇವೆ. ಈಗ ೬-೩೦ಕ್ಕೆ ಸಭೆ ಮುಗಿಸೋಣ. ನಾಳೆ ೮ ಗಂಟೆಗೆ ಪ್ರಾರಂಭ ಮಾಡೋಣ.

ಅಧ್ಯಕ್ಷರು.— ಈ ಕಡೆ ಸದಸ್ಯರು, ಆ ಕಡೆ ಒಪ್ಪಿದರೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಬಸವರಾಜ ಪಾಟೀಲ್.— ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.— ನೋಡೋಣ.

ಶ್ರೀ ಸಿ. ಎ ಚಂದ್ರೇಗೌಡ.—ಅಧ್ಯಕ್ಷರೇ, ಕೆಳಮಟ್ಟದಲ್ಲಿ ಆಡಳಿತ ಬಹಳ ಸಡಿಲವಾಗಿರುವುದ ರಿಂದ ಆಡಳಿತ ವಿಕೇಂದ್ರೀಕರಣ ಮಾಡಬೇಕೆಂದು ನಾನು ಸಲಹೆ ಮಾಡಬಯಸುತ್ತೇನೆ. ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಟ್ಟು, ಕೆಳಮಟ್ಟದ ಆಡಳಿತದಲ್ಲೇ ತನಿಖೆ ಮಾಡಿ ಸರಿಯಾದ ಶಿಕ್ಷೆ ಕೊಡಲಿಕ್ಕೆ ಅಥವಾ ಸಸ್ಪೆಂಡ್ ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದೇ ಆದರೆ ಆಡಳಿತ ಗುಣಮಟ್ಟ ಸುಧಾರಿಸುತ್ತದೆ ಆದರೆ, ಈಗ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡರೆ ಅದು ವಿಭಾಗಾಧಿಕಾರಿಯ ಪರ ಬಳಿ ಬರಬೇಕು; ವಿಭಾಗಾಧಿಕಾರಿಯವರು ಕ್ರಮ ತೆಗೆದುಕೊಂಡರೆ ಅದು ಸಂಬಂಧಪಟ್ಟ ಸಚಿವರ ಹತ್ತಿರ ಬರಬೇಕು. ಇದನ್ನೆಲ್ಲ ತಿಳಿದುಕೊಂಡೇ ಕೆಳದರ್ಜೆ ಅಧಿಕಾರಿಗಳಲ್ಲಿ ಆಡಳಿತ ದಕ್ಷತೆ ಕೆಟ್ಟು ಹೋಗಿದೆ. ಯಾರು ನಮ್ಮನ್ನು ಏನು ಮಾಡುವುದಕ್ಕಾಗುವುದಿಲ್ಲವೆನ್ನುವ ಭಾವನೆ ಅವರ ಮನಸ್ಸಿನಲ್ಲಿ ಬಂದುಬಿಟ್ಟಿದೆ ಆದುದರಿಂದ ಆಡಳಿತ ವಿಕೇಂದ್ರೀಕರಣ ಮಾಡಿ, ಕೆಳಮಟ್ಟದ ಅಧಿಕಾರಿಗಳಿಗೆ ಅಂದರೆ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಹೇಳುತ್ತೇನೆ.

ನಾವು ಕಟ್ಟಾ ಸಮಾಜವಾದಿ ಕಂದಾಯ ಸಚಿವರನ್ನು ಪಡೆದಿದ್ದೇವೆ. ಬಹಳ ಸಂತೋಷ. ಹಿಂದಿನ ಕಂದಾಯ ಸಚಿವರೂ ಕೂಡ ಸಮಾಜವಾದಿಗಳಾಗಿದ್ದರೆಂದು ಸ್ನೇಹಿತ ಸದಸ್ಯರೊಬ್ಬರು ಹೇಳಿದರು. ಅವರು 'ಅವರ' ಸಮಾಜವಾದಿಗಳಾಗಿದ್ದರು ಆದರೆ, ಇವರು ಸಮಗ್ರ ಸಮಾಜವಾದಿಗಳಾಗಿದ್ದಾರೆ. ಒಂದು ಸಣ್ಣ ಉದಾಹರಣೆ ಹೇಳುವುದಾದರೆ, ಹಂಚಿಕೆಗೆ ಇರುವ ಸರ್ಕಾರಿ ಜಮೀನಿನಲ್ಲಿ ಶೇಕಡ ೫೦ ರಷ್ಟು ಭಾಗವನ್ನು ಹರಿಜನ ಗಿರಿಜನರಿಗೆ ಹಂಚಬೇಕೆಂದು ಕಾನೂನು ಮಾಡಲಾಗಿದೆ. ಇದರ ಅಂಗೀಕಾರಕ್ಕಾಗಿ ಅಂದು ನಾವು ಒಕ್ಕೊರಲಿನಿಂದ ಕೈ ಎತ್ತಿದ್ದೆವು. ಹರಿಜನ-ಗಿರಿಜನರಂತೆ ಬಹಳ ಕೆಳದರ್ಜೆಯಲ್ಲಿ ವಾಸಿಸುವ ಕುಟುಂಬಗಳು ಬ್ರಾಹ್ಮಣರಲ್ಲಿದ್ದಾರೆ; ಒಕ್ಕಲಿಗರಲ್ಲಿದ್ದಾರೆ; ಲಿಂಗಾಯತರಲ್ಲಿದ್ದಾರೆ ಮತ್ತು ಅರಸು ಜನಾಂಗದಲ್ಲೂ ಇದ್ದಾರೆ. ಸಾಮಾನ್ಯವಾಗಿ ಎಲ್ಲಾ ವರ್ಗದಲ್ಲೂ ಕೆಳಮಟ್ಟದಲ್ಲಿರುವ ಮತ್ತು ಗತಿ ಇಲ್ಲದಿರುವ ಕುಟುಂಬಗಳಿವೆ; ಅಂತಹವರಿಗೂ ಸಹ ಸೌಕರ್ಯ ಕಲ್ಪಿಸುವುದಕ್ಕಾಗಿ ಜಮೀನು ಹಂಚಿಕೆಯಲ್ಲಿ ಹಕ್ಕನ್ನು ಕೊಡಿ ಎಂದು ನಾನು ಹೇಳಿದ್ದೆ. ಆದರೆ, ೫೦% ಪರ್ಸೆಂಟ್ ಜಮೀನನ್ನು ಹರಿಜನ-ಗಿರಿಜನ ಹಂಚುವವರೆಗೆ ಬೇರೆಯವರಿಗೆ ಒಂದಿಂಚು ಜಾಗವನ್ನೂ ಹಂಚಬೇಡಿರೆಂದು ಅಂದಿನ ಕಂದಾಯ ಸಚಿವರು ಆದೇಶ ನೀಡಿದ್ದರಂತೆ. ಈ ಆದೇಶ ಬಹುಶಃ ಸುತ್ತೋಲೆಯಿಂದ ಕೊಡಲಾಯಿತೋ ಅಥವಾ ದೂರ ವಾಣಿ ಸಂದೇಶದೊಂದಿಗೆ ತಿಳಿಸಲಾಯಿತೋ ನನಗೆ ಗೊತ್ತಿಲ್ಲ. ಇದರಿಂದಾಗಿ ಲಕ್ಷಾಂತರ ಎಕರೆ ಸಾಗು ವಳಿಗೆ ಯೋಗ್ಯವಾದ ಜಮೀನು ಬರಡಾಗಿ ಉಳಿಯಿತು. ಇದರ ನಡುವೆ ದರಖಾಸ್ತು ಸಮಿತಿ ರದ್ದಾ ಯಿತು. ಈಗ ರೆಕಾರ್ಡುಗಳನ್ನೆಲ್ಲ ಸಿದ್ಧಪಡಿಸಲಾಗಿದೆ, ಆದರೆ ದರಖಾಸ್ತು ಸಮಿತಿ ಇಲ್ಲ. ದರ ಖಾಸ್ತು ಸಮಿತಿ ಶಿಫಾರಸ್ಸು ಮಾಡದ ಹೊರತು ಜಮೀನನ್ನು ಹಂಚುವ ಹಾಗಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದುದರಿಂದ, ಈಗಲಾದರೂ ಆದಷ್ಟು ಬೇಗ ದರಖಾಸ್ತು ಸಮಿತಿಯನ್ನು ಪುನರ್ರಚನೆ ಮಾಡಬೇಕು. ಹೀಗೆ ಪುನರ್ರಚನೆ ಮಾಡುವ ಕಾಲದಲ್ಲಿ ದರಖಾಸ್ತು ಸಮಿತಿಗೆ ಹೆಚ್ಚಿನ ಅಧಿಕಾರ ಕೊಡ ಬೇಕು. ಜಮೀನನ್ನು ಮಂಜೂರು ಮಾಡುವ ಅಧಿಕಾರವನ್ನು ಆದಕ್ಕೆ ಕೊಡಬೇಕೇ ಹೊರತು ಬರೀ ಶಿಫಾರಸ್ಸು ಮಾಡುವ ಸಮಿತಿ ಆದಾಗಬಾರದು. ಜಮೀನು ಮಂಜೂರು ಮಾಡುವ ಅಧಿಕಾರವನ್ನು ಆದಕ್ಕೆ

ಕೊಟ್ಟು, ಹರಿಜನ-ಗಿರಿಜನರಿಗೆ ೫೦ ಪರ್ಸೆಂಟ್ ಜಮೀನು ಹಂಚಬೇಕೆಂದು ನಿಗದಿ ಮಾಡಿರುವಂತೆ ಬೇರೆ ಬೇರೆ ಜಾತಿಯವರಿಗೂ ಇಂತಿಷ್ಟು ಪರ್ಸೆಂಟ್ ಎಂದು ನಿಗದಿ ಮಾಡಿ ಜಮೀನನ್ನು ಸಂಪೂರ್ಣವಾಗಿ ಹಂಚುವ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಹಂಚುವಾಗ ಅನುಸರಿಸುವ ನಿಯಮಾವಳಿಗಳನ್ನು ಸ್ವಲ್ಪ ಕಡಮೆಮಾಡಿ; ಸುಲಭೀಕರಣ ಮಾಡಿ. ಈಗಿನ ನಿಯಮಾವಳಿ ಪ್ರಕಾರ ಒಬ್ಬ ಒಂದು ಗುಂಟೆ ಅಥವಾ ಒಂದು ಎಕರೆ ಜಮೀನು ಪಡೆಯಲು ವರ್ಷಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ. ಜಮೀನಿಲ್ಲದ ಹರಿಜನ-ಗಿರಿಜನರಿಗೆ ಮತ್ತಿತರ ಜಾತಿಯ ಜನರಿಗೆ ಮಂಜೂರು ಮಾಡಿ ಸ್ಥಳದಲ್ಲೇ ಸಾಗುವಳಿ ಚೀಟಿಯನ್ನು ಕೊಡುವ ಅಧಿಕಾರವನ್ನು ತಹಶೀಲ್ದಾರರಿಗೆ ಏತಕ್ಕೆ ಕೊಡಬಾರದು ? ೫ ಎಕರೆ ಇದ್ದರೆ ತಹಶೀಲ್ದಾರ್, ೧೦ ಎಕರೆ ಇದ್ದರೆ ಅಸಿಸ್ಟೆಂಟ್ ಕಮಿಷನರ್ ೧೫ ಎಕರೆ ಇದ್ದರೆ ಜಿಲ್ಲಾಧಿಕಾರಿ, ೨೦ ಎಕರೆ ಇದ್ದರೆ ವಿಭಾಗಾಧಿಕಾರಿ ಮತ್ತು ೨೫ ಎಕರೆ ಮತ್ತು ಅದಕ್ಕಿಂತ ಮೇಲ್ಪಟ್ಟಿದರೆ ಸರ್ಕಾರಕ್ಕೆ ಹಂಚುವ ಅಧಿಕಾರವಿದೆ ಎಂದು ಹೇಳಿ ಅಧಿಕಾರ ವಿಕೇಂದ್ರೀಕರಣ ವನ್ನು ಏತಕ್ಕೆ ಮಾಡಬಾರದು ? ಪೂರ್ಣಮಟ್ಟದ ಅಧಿಕಾರವನ್ನು ಕೆಳಮಟ್ಟದ ಅಧಿಕಾರಿಗಳಿಗೆ ಕೊಡಿ ಅವರು ಶೀಘ್ರವಾಗಿ ಮತ್ತು ನೇರವಾಗಿ ಯಾರಿಗೆ ಜಮೀನಿಲ್ಲ ಅವರನ್ನು ನೋಡಿಕೊಂಡು ಜಾತಿ ಆಧಾರದ ಮೇಲೆ ಶೇಕಡಾನುಸಾರ ಹಂಚುತ್ತಾರೆ. ಹೀಗೆ ಹಂಚುವಾಗ ಒಂದು ವೇಳೆ ಅಧಿಕಾರಿಗಳು ತಪ್ಪು ಮಾಡಿದರೆ, ಅವರ ಮೇಲೆ ಜವಾಬ್ದಾರಿಯನ್ನು ಹೊರಿಸಿ, ಶಿಕ್ಷೆ ಕ್ರಮಕೈಗೊಳ್ಳಿ. ಹೀಗೆ ಮಾಡದಿದ್ದರೆ, ಫೈಲುಗಳು ಪ್ರತಿ ವರ್ಷ ಬೆಳೆಯುತ್ತಿರುತ್ತವೆ, ಅರ್ಜಿ ಹಾಕಿದವನು ವರ್ಷಾನುಗಟ್ಟಲೆ ಕಛೇರಿ ಯಿಂದ ಕಛೇರಿಗೆ ಅಲೆಯಬೇಕಾಗುತ್ತದೆ. ಇತ್ತ ಬಡಜನರಿಗೆ ಜಮೀನು ಸಿಗುವುದಿಲ್ಲ. ಅತ್ತ ಕೃಷಿ ಯೋಗ್ಯ ಜಮೀನು ಬರಡಾಗಿ ಉಳಿಯುತ್ತದೆ. ಇನ್ನೊಂದು ಮುಖ್ಯ ವಿಚಾರವನ್ನು ನಾನು ಇಲ್ಲಿ ಹೇಳುವುದೇನೆಂದರೆ, ಅನೇಕ ಜನರಿಗೆ ಜಮೀನು ಮಾಡಲಿಕ್ಕೆ ಮನಸ್ಸೇ ಇರುವುದಿಲ್ಲ. ಜೊತೆಗೆ ವ್ಯವಸಾಯ ಮಾಡುವುದಕ್ಕೆ ಶಕ್ತಿ ಇರುವುದಿಲ್ಲ. ಅಂತಹವರಿಗೆ, ನೀನು ಬೇಸಾಯ ಮಾಡು, ತೆಗೆದುಕೋ ಜಮೀನನ್ನು ಎಂದು ಬಲವಂತವಾಗಿ ಕೊಡುತ್ತಾರೆ. ಸಸ್ಯಾಹಾರಿಗಳನ್ನು ಮಾಂಸಾಹಾರಕ್ಕೆ ಒತ್ತಾಯ ಮಾಡಿದಂತೆ ಇದು ಆಗಿದೆ. ನನಗೆ ಜಮೀನು ಬೇಡ,ನಾನು ಬೇರೆ ವೃತ್ತಿ ಮಾಡುತ್ತೇನೆ ಎನ್ನುವವನಿಗೆ, ಇಲ್ಲ, ನೀನು ತೆಗೆದುಕೋ ಜಮೀನು, ನೀನು ಬೇಸಾಯ ಮಾಡು ಎಂದು ಬಲವಂತವಾಗಿ ಜಮೀನು ಕೊಡುತ್ತಾರೆ. ಆದರೆ, ತತ್ವದ ಪ್ರಕಾರ ಯಾರಿಗೆ ಜಮೀನು ಮಾಡಲಿಕ್ಕೆ ಶಕ್ತಿ, ಯಾರಿಗೆ ಸವಲತ್ತು ಇದೆ, ಯಾರು ವ್ಯವಸಾಯ ಮಾಡಲಿಕ್ಕೆ ಆಸಕ್ತಿಯಿಂದಿದ್ದಾರೆ ಮತ್ತು ಯಾರು ಆ ರಕ್ತಗುಣವನ್ನು ಹೊಂದಿರುತ್ತಾರೆ ಅವರು ಬೇಸಾಯ ಮಾಡಲಿಕ್ಕೆ ಜಮೀನು ಕೇಳಿದರೆ, ಇಲ್ಲ ಎಂದು ಹೇಳುತ್ತಾರೆ. ಹೀಗಾಗಿ ಬೇಸಾಯ ಮಾಡಲು ಆಸಕ್ತಿ ಇಲ್ಲದವರಿಗೆಲ್ಲ ಜಮೀನು ಕೊಟ್ಟಿದ್ದರಿಂದ ಅವರು ಮನಸ್ಸಿಲ್ಲದೆ ಮನಸ್ಸಿನಿಂದ ಬೇಸಾಯ ಮಾಡುತ್ತಿದ್ದಾರೆ. ಕೆಲವರು ನಾಮಕಾವಸ್ಥೆಗಾಗಿ ಜಮೀನನ್ನು ಮಂಜೂರು ಮಾಡಿಸಿಕೊಂಡು, ಅದನ್ನು ಬೇಸಾಯ ಮಾಡಲಿಕ್ಕಾಗದೆ, ಜಮೀನ್ದಾರರಿಗೆ ಕೊಟ್ಟು, ಆ ಜಮೀನಿಗೆ ವರ್ಷಕ್ಕೆ ೧೦ ಪಲ್ಲ ರಾಗಿಯನ್ನೋ, ಭತ್ತವನ್ನೋ ಕೊಟ್ಟುಬಿಡಿ ಎಂದು ಹೇಳುವ ಪರಿಸ್ಥಿತಿ ಬಂದಿದೆ. ನ್ಯಾಯವಾಗಿ ಸಲ್ಲಬೇಕಾದ ಬಡವನಿಗೆ ಜಮೀನು ಮುಟ್ಟುತ್ತಿಲ್ಲ. ಆದುದರಿಂದ, ಯಾರು ಯಾರು ಜಮೀನು ಮಾಡಲು ಆಸಕ್ತಿಯಿಂದಿದ್ದಾರೆ ಮತ್ತು ಯಾರಿಗೆ ಮನಸ್ಸು ಇದೆ ಹಾಗೂ ಯಾರಿಗೆ ಶಕ್ತಿ ಇದೆ ಅವರಿಗೆ ಜಮೀನನ್ನು ಕಾನೂನು ಪ್ರಕಾರ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು.

ಮಾನ್ಯ ಕಡಿದಾಳ್ ದಿವಾಕರ್ ಮತ್ತಿತರ ಸ್ನೇಹಿತ ಸದಸ್ಯರು ಮಾತನಾಡುತ್ತಾ, ಅಡಿಕೆ ಮತ್ತು ತೆಂಗಿನ ತೋಟಗಳನ್ನು ಪ್ಲಾಂಟೇಷನ್ ಎಂದು ಕರೆಯಲಿಲ್ಲ; ಕೇವಲ ಕಾಫಿ ಮತ್ತು ರಬ್ಬರ್ ತೋಟಗಳನ್ನು ಮಾತ್ರ ಪ್ಲಾಂಟೇಷನ್ ಎಂದು ಕರೆದು ಅವರಿಗೆ ಅನೇಕ ಸವಲತ್ತುಗಳನ್ನು ಭೂಸುಧಾರಣೆ ಶಾಸನವನ್ನು ಜಾರಿಗೊಳಿಸುವಾಗ ಕೊಟ್ಟರೆಂದು ಹೇಳಿದರು. ಭೂಸುಧಾರಣೆ ಶಾಸನವನ್ನು ಮಾಡಿದಾಗ ನಾನು ಶಾಸಕನಾಗದಿದ್ದರೂ ಕೆ. ಟಿ. ಎ. ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ಕಾಫಿ ತೋಟವನ್ನು ಗೇಣಿ ಶಾಸನಕ್ಕೆ ಒಳಪಡಿಸಿಲ್ಲ. ಕಾರಣ, ಅವುಗಳನ್ನು ಯಾರು ಗೇಣಿಗೆ ಕೊಡುವುದಿಲ್ಲ. ಆದರೆ, ಅಡಕೆ ಮತ್ತು ತೆಂಗಿನ ತೋಟಗಳನ್ನು ಗೇಣಿಗೆ ಕೊಡುತ್ತಾರೆ. ಜೊತೆಗೆ ಕಾಫಿ ಬೆಳೆ ಸೆಂಟ್ರಲ್ ಎಕ್ಸೈಸ್‌ಗೆ ಸಂಬಂಧಿಸಿದ್ದು. ಆದುದರಿಂದ, ಯಾವ ರೂಪದಲ್ಲೂ ಇದನ್ನು ಮುಟ್ಟುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದಲೇ ಅದು ಉಳಿಯಿತು. ಇದೆಲ್ಲಕ್ಕಿಂತಲೂ ಮುಖ್ಯವಾಗಿ ಕಾಫಿ ಪ್ಲಾಂಟೇಷನ್‌ಗೂ ಮತ್ತು ಇತರ ಕೃಷಿ ಭೂಮಿಗೂ ಬಹಳ ವ್ಯತ್ಯಾಸವಿದೆ. ಕಾಫಿ ಬೆಳೆ ಒಂದು ಉದ್ದಿಮೆ. ಇದನ್ನು ನಮ್ಮ ಇಂದಿನ ಪ್ರಧಾನ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ ಅವರು ಹಿಂದೆ ಎರಡು-ಮೂರು ಸಲ ಮಲೆನಾಡಿಗೆ ಪ್ರವಾಸ ಬಂದಿದ್ದಾಗ ಅಲ್ಲಿ ತಂಗಿ, ಪ್ಲಾಂಟೇಷನ್ ವಿದ್ಯಮಾನಗಳನ್ನು ಚೆನ್ನಾಗಿ ಅರ್ಥ

ಮಾಡಿಕೊಂಡಿದ್ದಾರೆ. ಪ್ಲಾಂಟೇಷನ್‌ನ್ನು ನಡೆಸುವುದು ಛದ್ರಾವತಿ ಕಾರ್ಖಾನೆಯನ್ನು ನಡೆಸುವುದ ಕ್ಕಿಂತಲೂ ಕಷ್ಟ. ಇದು ನಿಸರ್ಗದ ಸಂಪತ್ತು. ಹವಾಮಾನ ಸರಿಯಾಗಿದ್ದರೆ ಉಳಿಯಿತು. ಇಲ್ಲ ದಿದ್ದರೆ, ಇಲ್ಲ. ಬ್ರೆಜಿಲ್ ದೇಶದಲ್ಲಿ ಶೀತಗಾಳಿ ಬೀಸಿ ಅಲ್ಲಿನ ಕಾಫಿ ಬೆಳೆಹೋದದ್ದರಿಂದ ಇಲ್ಲಿ ಬೆಳೆದ ಕಾಫಿಗೆ ಈಗ ಸ್ವಲ್ಪ ಬೆಲೆ ಸಿಕ್ಕಿದೆ. ಈಗ ಪ್ಲಾಂಟೇಷನ್‌ನವರು ಅಲ್ಪಸ್ವಲ್ಪ ಚಿಗುರಿಕೊಂಡಿದ್ದಾರೆ. ಇದೇ ಕಾಫಿ ತೋಟದ ಮಾಲೀಕರು ಐದಾರು ವರ್ಷಗಳ ಹಿಂದಿನ ಸ್ಥಿತಿಯನ್ನು ನೋಡಿದ್ದರೆ ತಾವೆಲ್ಲರೂ ನಗುತ್ತಿದ್ದರಿ. ಆದರೆ, ಇಂದು ಬ್ರೆಜಿಲ್ ದೇಶದ ಕಾಫಿ ಬೆಳೆ ಹೋಗಿಬಿಟ್ಟಿದ್ದರಿಂದ ಇಲ್ಲಿನ ಕಾಫಿಗೆ ಅಲ್ಪ ಸ್ವಲ್ಪ ದರ ಬಂದು, ಕಾಫಿ ತೋಟದ ಮಾಲೀಕರು ತಮ್ಮ ಕಾಲ ಮೇಲೆ ತಾವು ನಿಂತಿದ್ದಾರೆ. ಇದು ಒಂದು ಉದ್ದಿಮೆ. ದಯವಿಟ್ಟು ಇದರಲ್ಲಿ ಯಾರು ಕೈಹಾಕುವುದಕ್ಕೆ ಹೋಗಬೇಡಿ. ಬೇರೆ ವಿಚಾರ ಗಳಿಗೆ ಕೈಹಾಕಿ ನಾವು ಈಗಾಗಲೇ ಕೈ ಸುಟ್ಟುಕೊಂಡಿದ್ದೇವೆ.

ಕರ್ನಾಟಕದಲ್ಲಿ ಒಟ್ಟು ೨೮,೮೦೦ ಜನ ಪ್ಲಾಂಟರ್ಸ್ ಇದ್ದಾರೆ. ೧,೦೫,೦೦೦ ಹೆಕ್ಟೇರು ಜಮೀನಿನಲ್ಲಿ ಕಾಫಿ ಬೆಳೆಯನ್ನು ಬೆಳೆಯಲಾಗುತ್ತಿದೆ. ಇಡೀ ಭಾರತದ ಮಟ್ಟದಲ್ಲಿ ನೋಡುವುದಾದರೆ, ೯೦ ಸಾವಿರ ಜನ ಈ ಉದ್ಯಮದಲ್ಲಿ ನಿರತರಾಗಿದ್ದಾರೆ. ಮತ್ತು ೧,೯೫,೦೦೦ ಹೆಕ್ಟೇರು ಜಮೀನಿನಲ್ಲಿ ಮಾತ್ರ ಕಾಫಿ ಬೆಳೆಯನ್ನು ಬೆಳೆಯಲಾಗುತ್ತಿದೆ. ಕಾಫಿಯಿಂದ ಭಾರತಕ್ಕೆ ಕೋಟ್ಯಾಂತರ ರೂಪಾಯಿ ವಿದೇಶಿ ವಿನಿಮಯ ಬರುತ್ತಿದೆ. ತಲೆ ನೋವು ಬಂದರೆ ಅದನ್ನು ಶಮನ ಮಾಡುವುದು ಕಾಫಿ ! ಸ್ಟ್ರಾಂಗ್ ಕಾಫಿ ಕುಡಿದರೆ ವಿಶ್ರಾಂತಿ ಪಡೆಯುವಂತೆ ಮಾಡುವಂತೆ ಉದ್ಯಮ ಇದು. ''ಮೊರಿ ಕಣ್ಣು ಹೋತನ ಮೇಲೆ'' ಎನ್ನುವಂತೆ ಸರ್ಕಾರಕ್ಕೆ ಈ ಉದ್ಯಮದ ಮೇಲೆ ಕಣ್ಣು ಏತಕ್ಕೆ ? ಈ ಉದ್ಯಮದಿಂದ ಲಕ್ಷಾಂತರ ಜನ ಕೆಲಸಗಾರರು ಜೀವನ ಮಾಡುತ್ತಿದ್ದಾರೆ ಫ್ಯಾಕ್ಟರಿ ಕೆಲಸಗಾರರಿಗೆ ಅನುಕೂಲ ಇರುವಂತೆ ಎಲ್ಲರೀತಿಯ ಅನುಕೂಲಗಳನ್ನು ಈ ಉದ್ಯಮದಲ್ಲಿ ದುಡಿಯುವ ಕೆಲಸಗಾರರಿಗೆ ಕಲ್ಪಿಸಿಕೊಟ್ಟಿದ್ದಾರೆ. ಕಾನೂನು ಪ್ರಕಾರ ಏನೇನು ಸವಲತ್ತುಗಳನ್ನು ಕೊಡಬೇಕೋ ಅವೆಲ್ಲವುಗಳನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೆ ಈ ಉದ್ಯಮದಿಂದ ಕೋಟ್ಯಾಂತರ ರೂಪಾಯಿಗಳ ವರಮಾನ ಬರುತ್ತೆ. ಕೋಟ್ಯಾಂತರ ರೂಪಾಯಿಗಳ ವರಮಾನ ಬರತಕ್ಕ ಉದ್ಯಮದ ಮೇಲೆ ಸೀಲಿಂಗ್ ಹಾಕಿದರೆ ; ಲಕ್ಷಾಂತರ ಮಂದಿ ಕೆಲಸಗಾರರ ಗತಿ ಏನು ? ಕಾಫಿ ಉದ್ಯಮವನ್ನು ಇನ್ನು ಚೆನ್ನಾಗಿ ಬೆಳೆಸುವುದಕ್ಕೆ ಸರ್ಕಾರ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಉದ್ಯಮವನ್ನು ಸಮಗ್ರವಾಗಿ ಬೆಳೆಸುವುದಕ್ಕೆ ಸರ್ಕಾರ ಮುಂದೆ ಬರಬೇಕು. ಕಾಫಿ ಉದ್ಯಮ ಮಾಡುವವರ ಮೇಲೆ ಪ್ರಕೃತಿ ವಿರೋಧ ಅದರೆ ಅವನು ಹೋದ. ಹಾಗೆ ತೆಂಗಿನ ತೋಟಕ್ಕೆ ಹೋಗಿ ನೋಡಿದರೆ ಯಾವಾಗಲೂ ಕಾಯಿ ಇರುತ್ತೆ ; ಅಡಿಕೆ ತೋಟವೂ ಅಷ್ಟೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಅವರು ತೆಂಗಿನತೋಟ ನೋಡಿದ್ದಾರೆಯೆ ?

ಶ್ರೀ ಸಿ. ಎ. ಚಂದ್ರೇಗೌಡ —ಪ್ರತಿದಿನ ಸೂಪರ್‌ವೈಸ್ ಮಾಡದೇ ಇದ್ದರೆ ಆವನಿಗೆ ಬೆಳೆ ಇಲ್ಲ. ಮಕ್ಕಳನ್ನು ಯಾವರೀತಿ ನೋಡಿಕೊಳ್ಳುತ್ತೇವೆಯೋ ಆ ರೀತಿ ನೋಡಿಕೊಳ್ಳಬೇಕು. ರೇಷ್ಮೆ ಕೈಗಾರಿಕೆಗೆ ಎಷ್ಟು ಶ್ರಮ ಪಡಬೇಕೋ ಅಷ್ಟು ಶ್ರಮ ಪಡಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.—ಬರತಕ್ಕಂಥ ಆದಾಯ ?

ಶ್ರೀ ಸಿ. ಎ ಚಂದ್ರೇಗೌಡ.—ಕೊಡಗು, ಹಾಸನ, ಚಿಕ್ಕಮಗಳೂರು, ನರಸಿಂಹರಾಜಪುರ ಹಾಗೂ ಮೂಡಿಗೆರೆ ಈ ಭಾಗಗಳಲ್ಲಿ ಮಾತ್ರ ಈ ಕಾಫಿ ಬೆಳೆ ಇದೆ. ಇನ್ನು ಎಲ್ಲೂ ಇದು ಇಲ್ಲ. ಇದು ಕರ್ನಾಟಕದ ಮೂರು ಕೋಟಿ ಜನತೆಯ ಸಮಸ್ಯೆ ಏನೂ ಅಲ್ಲ. ಹೀಗಿರುವುದರಿಂದ ಮಾನ್ಯ ಕಂದಾಯ ಮಂತ್ರಿಗಳು ಪ್ರಧಾನ ಮಂತ್ರಿಯವರ ಜೊತೆ ಚರ್ಚೆ ಮಾಡಿ, ಕಾಫಿ ಬೋರ್ಡು ಜೊತೆ ಮತ್ತು ಲೇಬರ್ ಡಿಪಾರ್ಟಮೆಂಟ್ ಜೊತೆ ಚರ್ಚೆ ಮಾಡಿ ರಾಜ್ಯದ ಹಿತದೃಷ್ಟಿಯಿಂದ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿರುವವರಿಗೆ ಡಬಲ್ ಫೈನ್ ಹಾಕಿ, ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತೆ, ಸುಮ್ಮನೆ ಅನುಭವಿಸಿಕೊಂಡು ಹೋಗುವುದಕ್ಕೆ ? ಏತಕ್ಕೆ ಬಿಡುತ್ತೀರಿ.ಕಾಫಿ ಬೀಜವನ್ನು ರಾಗಿ, ಭತ್ತ ಮಾಡಿದಂತೆ ಮಾರುಕಟ್ಟೆಯಲ್ಲಿ ತೆಗೆದುಕೊಂಡು ಹೋಗಿ ಮಾರುವ ಹಾಗಿಲ್ಲ. ಕಾಫಿ ಬೋರ್ಡು ರೂಲ್ಸ್‌ಗೆ ಒಳಪಟ್ಟೇ ವ್ಯಾಪಾರಮಾಡಬೇಕಾಗಿದೆ ಕಾಫಿ ತೋಟಗಾರರು ಕಂದಾಯ ದಲ್ಲಿ ಉಳಿದುಕೊಂಡಿರಬಹುದು, ಜಮೀನು ಎನ್‌ಕ್ರೋಚ್‌ಮೆಂಟ್‌ಗೆ ಕಾರಣ ಇದೆ. ೨೦ ವರ್ಷದ ದರ ವಾಸ್ತು ರೆಕಾರ್ಡ ಇಟ್ಟಿದ್ದಾರೆ. ಫಾರೆಸ್ಟ್ ಡಿಪಾರ್ಟಮೆಂಟಿನಿಂದ ಇಂಥ ಕೇಸುಗಳನ್ನು ಡಿಸ್‌ಪೋಸಲ್ ಮಾಡಿಸಿ ಕಾಫಿ ತೋಟ ಬೆಳೆಯುವವರಿಗೆ ಕೊಡಿ, ಫಾರೆಸ್ಟ್ ಇಲಾಖೆಯವರಿಗಿಂತ ಉತ್ತಮಮಟ್ಟದಲ್ಲಿ

ಮಾಲ್ಕಿ ಬೆಳೆಯುತ್ತಾರೆ. ಸರ್ಕಾರದ ದಟ್ಟವಾದ ಕಾಡಿಗಿಂತ ಮಾಲ್ಕಿ ಬೆಳೆಯುವುದರಿಂದ ಇನ್ನೂ ಹೆಚ್ಚಿನ ದಟ್ಟವಾದ ಕಾಡನ್ನು ಬೆಳೆಸುಬಹುದು. ಬಡವರಾಗಲೀ, ದೊಡ್ಡವರಾಗಲೀ, ಅವರಿಗೆ ಜಮೀನನು ಸ್ಯಾಂಕ್ಷನ್ ಮಾಡಿ, ಉಳುವವನಿಗೆ ಜಮೀನು ಕೊಡಿ, ಬರೀ ಪುಸ್ತಕದಲ್ಲಿ, ಕಾಗದದಲ್ಲಿ ಈ ಮನೆಯ ಕಡತದಲ್ಲಿ ಮಾಡಿದರೆ ಸಾಲದು, ಕಾರ್ಯತ ; ಈ ಕೆಲಸವನ್ನು ಕಾರ್ಯರೂಪಕಕ್ಕೆ ತರಲು ಸಮಗ್ರ ರೀತಿಯಲ್ಲಿ ವಿಚಾರಣೆ ಮಾಡುತ್ತೀರೆಂದು ನಂಬಿರುತ್ತೇನೆ,

ವ್ಯವಸಾಯ ಇಲಾಖೆಯವರು ಇವತ್ತು ಈ ದೇಶದಲ್ಲಿ ಸಮೃದ್ಧಿಯಾದ ಬೆಳೆಯನ್ನು ಬೆಳೆಯುವು ದಕ್ಕೆ, ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಉತ್ತಮ ರೀತಿಯಲ್ಲಿ ಸಂಶೋಧನೆ ಮಾಡಿ. ಉತ್ತಮ ತಳಿಗಳನ್ನು ಕಂಡುಹಿಡಿದಿದ್ದಾರೆ. ಮಲೆನಾಡ ಭಾಗದಲ್ಲಿ ಯಾವ ಯಾವ ಬೆಳೆಗಳನ್ನು ಹಾಕಿದರೆ ಬರುತ್ತೆ, ಬೇರೆ ಬೇರೆ ಭಾಗಗಳಲ್ಲಿ ಯಾವ ರೀತಿಯ ಬೆಳೆಗಳನ್ನು ಹಾಕಿದರೆ ಬರುತ್ತೆ, ಕಡಿಮೆ ಖರ್ಚಿನಲ್ಲಿ ಹೆಚ್ಚು ಬೆಳೆ ಬೆಳೆಯುವಂತೆ ವ್ಯವಸ್ಥೆಯನ್ನು ವ್ಯವಸಾಯ ಇಲಾಖೆಯವರು ಜಾರಿಗೆ ತರಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರುಗಳಿಗೆ ಗ್ರಾಮಸೇವಕರುಗಳು ಎಲ್ಲಿದ್ದಾರೆಂಬುದೇ ಗೊತ್ತಿರುವುದಿಲ್ಲ. ಇವತ್ತು ಹಳ್ಳಿಗಳಲ್ಲಿ ಸರ್ಕಾರದವರಿಂದ, ಸರ್ಕಾರದ ಅಧಿಕಾರಿಗಳಿಂದ ರೈತರು ಏಳಿದುಕೊಂಡು ವ್ಯವಸಾಯವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮಿಂದ ಪ್ರಗತಿಯಾಗಿದೆಯೆಂದು ತಾವು ತಿಳಿದುಕೊಳ್ಳಬೇಡಿ. ಗ್ರಾಮಗಳಲ್ಲಿ ೧೦ ಜನ ಬುದ್ಧಿವಂತ ರೈತರು ಮಾಡಿದ್ದನ್ನು ನೋಡಿಕೊಂಡು ಮಾಡಿದ್ದಾರೆ. ರೇಡಿಯೋ ಅನೌನ್ಸ್‌ಮೆಂಟ್, ಪತ್ರಿಕೆಗಳನ್ನು ನೋಡಿಕೊಂಡು ಮಾಡಿದ್ದಾರೆ. ಆ ಕೀರ್ತಿ ನಿಮಗೆ ಬಂದಿದೆ ಬಹಳ ಸಂತೋಷ. ಗ್ರಾಮಾಂತರ ಅಧಿ ಕಾರಿಗಳಲ್ಲಿ ಜನತೆಯ ಸಂಪರ್ಕ ಹೆಚ್ಚು ಹೆಚ್ಚು ಇರುವಹಾಗೆ ಮಾಡಿ, ಇಷ್ಟನ್ನು ತಾವು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಸಹಕಾರ ಸಂಘಗಳ ಮೂಲಕ ಮತ್ತು ಇನ್ನಿತರೆ ಸಂಸ್ಥೆಗಳ ಮೂಲಕ ರೈತರಿಗೆ ಕೊಟ್ಟ ಸಾಲಗಳ ಮೇಲಿನ ಪೀನಲ್ ಇಂಟರೆಸ್ಟ್‌ನ್ನು ಹಿಂದಿನ ಸರ್ಕಾರದವರು ವಜಾ ಮಾಡಿದ್ದರು. ಇಂಥ ತಾರೀಖಿನೊಳಗೆ ಅಸಲು ಕಟ್ಟಿದ್ದರೆ, ಇಂಟರೆಸ್ಟ್ ಮತ್ತು ಪೀನಲ್ ಇಂಟರೆಸ್ಟ್ ಕೊಡಬೇಕಾಗಿಲ್ಲವೆಂದು ತಿಳಿಸಿದ್ದರು. ರೈತರಿಂದ ಡಿಫರೆನ್ಸಿಯಲಿನ್ ಇಂಟರೆಸ್ಟ್ ಕಲೆಕ್ಟ್ ಮಾಡುತ್ತಿದ್ದಾರೆ ಇದರ ಬಗ್ಗೆ ಜಿಲ್ಲಾ ವ್ಯವಸಾಯ ಅಧಿಕಾರಿಗಳ ಜೊತೆ ವ್ಯವಹರಿಸಿ, ಡಿಫರೆನ್ಸಿಯಲ್ ಪೀನಲ್ ಇಂಟರೆಸ್ಟ್ ವಿತ್‌ಡ್ರಾ ಮಾಡಿ ರೈತರನ್ನು ಋಣ ಮುಕ್ತರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೬-೩೦ ಪಿ.ಎಂ.

ಶ್ರೀ ಸಿ. ಎ. ಚಂದ್ರೇಗೌಡ —ಅಧ್ಯಕ್ಷರೆ, ಇನ್ನು ಅನೇಕ ವಿಚಾರಗಳನ್ನು ಮಾತನಾಡಬೇಕಾಗಿತ್ತು. ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಇನ್ನು ಅಗ್ರಿ ಕಲ್ಚರ್ ಡಿಪಾರ್ಟ್‌ಮೆಂಟ್ ಪ್ರಗತಿ ಬಗ್ಗೆ ಹೆಚ್ಚು ವ್ಯಕ್ತಪಡಿಸದೆ ರಿಜಿಸ್ಟ್ರೇಷನ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಶ್ರೀ ಹೆಬ್. ಟಿ ಚೌಡಯ್ಯ —ಸ್ವಾಮಿ, ಈ ವ್ಯವಸಾಯದ ಇಲಾಖೆಯ ಪ್ರಗತಿಯನ್ನು ಮೆಚ್ಚುತ್ತೇನೆ ಅಂತ ಹೆಳುತ್ತಿದ್ದೀರಿ. ಈಗ ಫರ್ಟಿಲೈಸರ್ ಬೆಲೆ ಜಾಸ್ತಿಯಾಗಿರುವುದನ್ನು ತಾವು ಒಪ್ಪುತ್ತೀರಾ.

ಶ್ರೀ ಸಿ. ಎ. ಚಂದ್ರೇಗೌಡ.—ಇವೊತ್ತು ವ್ಯವಸಾಯ ಇಲಾಖೆಯ ಪ್ರಗತಿಗೂ, ಗೊಬ್ಬರದ ದರ ಏರಿರುವುದಕ್ಕೂ ಸಂಬಂಧ ಇಲ್ಲ. ಸೈಂಟಿಫಿಕ್ ಮೆತಡ್. ಟ್ರಾಕ್ಟರ್ ಕೊಟ್ಟಿರತಕ್ಕದ್ದು, ಸಾಲ ಕೊಟ್ಟಿರತಕ್ಕದ್ದು, ಬೀಜ ಕೊಟ್ಟಿರತಕ್ಕದ್ದರ ಬಗ್ಗೆ ಹೇಳಿದ್ದೇನೆ ಗೊಬ್ಬರದ ಬೆಲೆ ಜಾಸ್ತಿಯಾಗಿರು ವುದು ನನಗೂ ಗೊತ್ತಿದೆ. ಅದರ ಬಗ್ಗೆ ಕೇಂದ್ರ ಸರ್ಕಾರದವರು ಬೆಲೆ ಕಡಿಮೆ ಮಾಡಲಿಕ್ಕೆ ಯೋಚನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಭರವಸೆ ಕೂಡ ಕೊಟ್ಟಿದ್ದಾರೆ. ಇನ್ನು ಸಬ್ ರಿಜಿಸ್ಟ್ರಾರ್ ಆಫೀಸುಗಳ ವಿಚಾರ ಹೇಳಬೇಕು ಅಂದರೆ ಅಲ್ಲಿ ಮಾಮೂಲಿ ಜಾಸ್ತಿಯಾಗುತ್ತಿದೆ.ಅಲ್ಲಿ ಒಂದು ಸಾವಿರ ರೂಪಾಯಿಗೆ ಇಷ್ಟು, ಒಂದು ಲಕ್ಷ ರೂಪಾಯಿಗೆ ಇಷ್ಟು ಕೊಡಬೇಕು ಎಂದು ಇದೆ. ಅದನ್ನು ತಪ್ಪಿಸಿದರೆ ಸಾಕು ಅದಕ್ಕಿಂತಲೂ ಹೆಚ್ಚು ಬೇಡ. ಹಿಂದೆ ನಮ್ಮ ಮಲೆನಾಡಿನಲ್ಲಿರತಕ್ಕವರು ಯಾರಾದರೂ ಹೆಣ್ಣು ಕೊಡ ಬೇಕು ಅಂದರೆ ಡಾಕ್ಟರುಗಳಿಗೆ, ಇಂಜಿನಿಯರ್‌ಗಳಿಗೆ ಕೊಡಬೇಕು ಅಂತ ಅವರಿಗೆ ಗ್ರೇಡ್ ಇತ್ತು. ಈಗ ಏನಾಗಿದೆ ಅಂದರೆ ಸಬ್ ರಿಜಿಸ್ಟ್ರಾರ್. ಪ್ರೊಬೆಷನರಿ ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಬ್ರೇಕ್ ಇನ್ಸ್‌ಪೆಕ್ಟರ್ ಈ ನಾಲ್ಕು ಜನರಿಗೆ ಡಿಮ್ಯಾಂಡ್ ಜಾಸ್ತಿಯಾಗಿದೆ. ಡಾಕ್ಟರುಗಳಿಗೆ. ಇಂಜಿನಿಯರ್‌ಗಳಿಗೆ ಡಿಮ್ಯಾಂಡ್ ಕಡಿಮೆಯಾಗುತ್ತಿದೆ.

ಶ್ರೀ ಎ. ಲಕ್ಷೀಸಾಗರ್.—ಅಧ್ಯಕ್ಷರೆ, ಬೆಂಗಳೂರಿಗೆ ಒಬ್ಬ ಸಬ್ ರಿಜಿಸ್ಟ್ರಾರ್ ಬರಬೇಕು ಅಂದರೆ ೧೫,೦೦೦ ರೂಪಾಯಿ ಕೊಟ್ಟರೆ ಇಲ್ಲಿಗೆ ಪೋಸ್ಟಿಂಗ್. ಆದ್ದರಿಂದ, ಅವನು ಅದನ್ನು ಸಂಪಾದನೆ ಮಾಡ ಬೇಕು, ಮತ್ತೆ ಅದರ ಮೇಲೂ ಸಂಪಾದನೆ ಮಾಡಬೇಕಾಗುತ್ತದೆ. ಲಂಚ ಇಲ್ಲದಿದ್ದರೆ ಡಾಕ್ಯುಮೆಂಟ್ ರಿಜಿಸ್ಟರ್ ಮಾಡುತ್ತಾರೆ ಏನು? ನಾನು ಲಾಯರ್ ಆಗಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಸಿ. ಎ. ಚಂದ್ರೇಗೌಡ.—ಸ್ವಾಮಿ, ಎಂ.ಎಲ್.ಎ. ಗಳಿಗೆ ಅಧಿಕಾರ ಕೊಡಲಿ ನಾವು ಹಿಡಿಯಂತ್ರೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇವೊತ್ತು ಎಂ.ಎಲ್.ಎ. ಗಳಿಗೆ ಅಧಿಕಾರ ಕೊಟ್ಟರು ಅವರ ಬದಲು ಇವರು ತೆಗೆದುಕೊಳ್ಳುವ ಉದಾಹರಣೆಗಳು ಇವೆ. ಒಬ್ಬೊಬ್ಬ ಎಂ.ಎಲ್.ಎ.ಗೆ ಅಸಿಸ್ಟೆಂಟ್ ಇಂಜಿನಿಯರ್ ಇಷ್ಟು, ಪಿ.ಎಸ್.ಐ ಇಷ್ಟು ಮಾಪೊಲಿ ಕೊಡಬೇಕು ಅಂತ ಹೇಳುವ ಎಂ.ಎಲ್.ಎ. ಗಳು ಇದ್ದಾರೆ.

ಶ್ರೀ ಸಿ. ಎ. ಚಂದ್ರೇಗೌಡ —ಅಧ್ಯಕ್ಷರೆ, ಇವೊತ್ತು ಮಾನ್ಯ ಮಂತ್ರಿಗಳು ಸಬ್‌ರಿಜಿಸ್ಟ್ರಾರ್ ಆಫೀಸಿನ ವಿಚಾರದ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕೆ ದು ಕೇಳಕೊಳ್ಳುತ್ತೇನೆ. ಇನ್ನು ವಿಲೇಜ್ ಅಕೌಂಟೆಂಟ್ ಬಗ್ಗೆ ಹೇಳಬೇಕಂ ಅಂದರೆ ಇವೊತ್ತು ಬೆಂಗಳೂರಿನಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿಸಲಿಕ್ಕೆ ಸರ್ಕಾರದಲ್ಲಿ ಹಣ ಇದೆ ಅದೇ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಕ್ವಾರ್ಟರ್ಸ್ ಕಟ್ಟಿಸಲಿಕ್ಕೆ ಹಣ ಇಲ್ಲ. ಇವೊತ್ತು ಅವರುಗಳಿಗೆ ಹಳ್ಳಿಗಳಲ್ಲಿ ವಾಸಕ್ಕೆ ಮನೆಗಳು ಬಾಡಿಗೆ ದೊರೆಯುವುದು ಕಷ್ಟ ಇದೆ. ಅವರ ಮಕ್ಕಳು ವಿದ್ಯಾಭ್ಯಾಸ ಮಾಡಲಿಕ್ಕೆ ಸ್ಕೂಲುಗಳಿಲ್ಲ ಆ ದ್ದರಿಂದ ಅವರು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ವಾಸ ಮಾಡಬೇಕಾಗುತ್ತದೆ. ಇದರಿಂದಾಗಿ ಅವರು ವಾರಕೆ ಒಂದು ಸಾರಿ ಊರುಗಳಿಗೆ ಹೋಗುವುದನ್ನು ಇಟ್ಟುಕೊಂಡಿರುತ್ತಾರೆ. ಅದುದರಿಂದ ಇಲ್ಲಿ ಮಲಿ ಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿಸುವುದನ್ನು ನಿಲ್ಲಿಸಿ, ಹಂಡ್ಯೋ ಸ್ಕೀಮಿನಲ್ಲಿ ಆಗಲಿ, ತಮ್ಮ ಸ್ಕೀಮಿ ನಲ್ಲಿಯೇ ಆಗಲಿ, ಅಥವಾ ಜನತಾ ಸ್ಕೀಮಿನಲ್ಲಿಯೇ ಆಗಲಿ, ಅವರಿಗೆ ಮನೆಗಳನ್ನು ಕಟ್ಟಿಸುವಂತ ವ್ಯವಸ್ಥೆ ಮಾಡಬೇಕು. ಈ ಕಾರ್ಯವನ್ನು ಮಾನ್ಯ ಮಂತ್ರಿಗಳಾದ ಬಂಗಾರಪ್ಪನವರ ಕಾಲದಲ್ಲಿಯೇ ಎಲ್ಲಾ ಕಡೆ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಕ್ವಾರ್ಟರ್ಸ್ ಆಯಿತು ಅಂದರೆ ಅವರು ವಿಲೇಜ್‌ಗಳಲ್ಲೇ ಇರುತ್ತಾರೆ. ಇವೊತ್ತು ತಾಲ್ಲೂಕು ಲೆವಲ್‌ನಲ್ಲಿರತಕ್ಕ ತಹಶೀಲ್ದಾರರಿಗೆ, ಅಸಿಸ್ಟೆಂಟ್ ಕಮಿಷನರ್‌ಗೆ ಮನೆಗಳು ಬಾಡಿಗೆ ಸಿಕ್ಕುವುದು ಕಷ್ಟವಾಗಿದೆ. ಅದೇ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕ್ವಾರ್ಟರ್ಸ್ ಇದೆ. ಬೇರೆ ಎಲ್ಲಾ ಡಿಪಾರ್ಟ್‌ಮೆಂಟುಗಳಲ್ಲಿಯೂ ಕ್ವಾರ್ಟರ್ಸ್ ಇದೆ. ಇನ್ನು ಪಿ.ಡಬ್ಲ್ಯೂ.ಡಿ. ಬಿಡಿ. ಅವರು ಪ್ಲಾನ್, ಎಸ್ಟಿಮೇಟ್ ತಯಾರು ಮಾಡುವುದಕ್ಕೆ ಮೊದಲೇ ಅವರು ಅನುಕೂಲ ಮಾಡಿಕೊಂಡಿರುತ್ತಾರೆ. ಆದ್ದರಿಂದ ಈ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಕ್ವಾರ್ಟರ್ಸ್ ಕಟ್ಟಿಸುವಂತೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಕೇಳಿಕೊಂಡು, ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತ್ತುಗಳನ್ನು ಮುಗಿಸುತ್ತೇನೆ.

MR. SPEAKER.—The House stand adjourned to meet at 8.00 A.M. tomorrow.

The House adjourned at Thirty five minutes past Six of the Clock to meet at Eight of the Clock on Tuesday the 22nd July 1980.